


Golden Hour
ಸುವರ್ಣ ಗಳಿಗೆ

RNI No. KARBIL/2018/78464
Regd.No.G2/KRNA/BGE-1168/2022-2024

# ಬ್ರೈನ್ ವಾಯ್ಸ್
# BRAIN VOICE Newsletter

Volume 5 Issue 4 May 2024 Pages 20 ₹ 30 Bilingual Monthly









First of its Kind hybrid
OT-Cath lab Suite in India





Editor
**Dr. N.K. Venkataramana**
Founder and
Chief Neurosurgeon
BRAINS Super Speciality Hospital
Mob : 9845030906

Honorary Editor
**Dr. K.R. Kamalesh**
Mob : 9448793346

**BrainS**
**SUPER SPECIALITY HOSPITAL**

192, T Mariyappa Road,
Lalbagh Siddapura,
Jayanagar 1st Block,
Bengaluru, Karnataka 560011

**24/7 Helpline +91 9148080000**
**For Appointments: +91 94832 40925**

**Special Article**

**Dr. Ashwith**
ER Physician,
BRAINS superspeciality hospital



# *A Journey Through Time:* The Evolution of Trauma Care Services in Hospitals

From the battlefields of ancient wars to the bustling emergency rooms of modern hospitals, the history of trauma care services is a testament to human ingenuity, resilience, and the relentless pursuit of saving lives. Spanning millennia, this journey showcases the remarkable advancements in medical knowledge, technology, and healthcare systems that have transformed the treatment of traumatic injuries.

## Ancient Beginnings and Military Influence

The origins of trauma care can be traced back to ancient civilizations, where basic wound care and supportive measures were provided to the injured. Military conflicts played a crucial role in driving innovations in trauma care, as battlefield injuries necessitated rapid and effective medical interventions. Throughout history, military surgeons and medics have pioneered surgical techniques, developed new treatments, and organized medical services to care for wounded soldiers.




## Delivering immediate Aid to the injured

In medicine, its called the 'GOLDEN HOUR'-getting the trauma patient to definitive care within an hour of the injury for the best chance of survival before shock causes damage to organs. But some injured people

**Subscribe to BRAINVOICE**

**This magazine is meant for educational purposes, without any profit motive. The proceeds will go to "Comprehensive Trauma Consortium" a charitable trust, helping poor patients and accident victims. Subscriptions can be through cheque/ NEFT/RTGS to the below account.**

**Contribute to Save a Life**

**Annual Subscription: Rs.400/-** (including postage)


Postal Address: **BRAINS**
**N0. 560, 9th 'A' Main, Near Indiranagar Metro Station, Bangalore - 560038.**

Scan & Pay

Account Name: **Comprehensive Trauma Consortium**
Bank: **Axis Bank**
Account No. **919010047372470**
IFSC Code: **UTIB0002969**
Branch : **Double Road, Indiranagar, Bangalore**

**Special Attension:** This magazine is an exclusive copyright of Brains and any reproduction, distribution, copying or any similar actions are prohibited and liable for actions and claims under the applicable intellectual property law.

**ವಿಶೇಷ ಸೂಚನೆ:** ಇಲ್ಲಿ ಪ್ರಕಟವಾಗುವ ಲೇಖನವನ್ನು ಭಾಗಶಃ ಅಥವಾ ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳುವವರು ಲೇಖಕರ ಅಥವಾ ಸಂಪಾದಕರ ಲಿಖಿತ ಅನುಮತಿ ಪಡೆಯಬೇಕು. ಇಲ್ಲದಿದ್ದರೆ ಇದನ್ನು ಕೃತಿಚೌರ್ಯ ಎಂದು ಭಾವಿಸಲಾಗುವುದು.




don't have an hour: for instance, for those who are bleeding heavily may have just minutes to live unless the bleeding is slowed or stopped

## The Emergence of Hospitals

The concept of hospitals as institutions for medical care began to take shape in ancient times, with early examples found in ancient Egypt, Greece, and Rome. However, these early hospitals primarily focused on caring for the sick, with limited specialization in trauma care. It wasn't until the advent of modern surgery in the 19th century, coupled with advancements in anesthesia and antiseptic techniques, that hospitals began to provide more specialized care for traumatic injuries.

## The Birth of Trauma Centers

In 1966, landmark report by National Academy of Sciences "Accidental Death and Disability; The Neglected Disease of Modern Society" described traumatic injury as a national epidemic. This report was aturining point for Trauma.

The establishment of trauma centers in the mid-20th century marked a pivotal moment in the history of trauma care services. These specialized facilities were equipped with advanced medical technology, dedicated trauma teams, and specialized resources to provide comprehensive care to the most severely injured patients. The first trauma center in the United States, founded in 1966 at the University of Maryland Medical Center in Baltimore, set the stage for the development of trauma systems that would revolutionize trauma care delivery.

## Advancements in Emergency Medical Services (EMS)

The development of organized EMS systems played a critical role in improving the prehospital care of trauma patients. Ambulances, paramedic services, and rapid transport protocols became essential components of trauma systems, ensuring that patients received timely and appropriate care from the scene of the injury to the hospital. The integration of EMS with trauma centers and other healthcare facilities further enhanced the coordination and efficiency of trauma care delivery.

## Technological Innovations

Advances in medical technology have transformed the diagnosis and treatment of traumatic injuries. Imaging techniques such as CT scans and MRI revolutionized the evaluation of trauma patients,

Brain WAVE of the week

Destruction of neurons
Illness and Care

Tsunami of neurodegenerative diseases are expected in next few decades. Younger individuals in their 40s with heightened inflammation (in = inside body, Flame = burning, tion = process) levels are at a greater risk of experiencing reduced brain volumes in later years. The causes of midlife inflammation can be simple GERD, sleeplessness, stress, high BP, high Cholesterol, high blood sugar to complex diseases like rheumatoid arthritis, HIV, psoriasis etc. proper control of these diseases in midlife helps in avoiding Alzheimer's disease and other neurodegenerative diseases in late life.

DR. N K VENKATARAMANA
Founder Chairman & Chief Neurosurgeon

BrainS SUPER SPECIALITY HOSPITAL

For more information, visit:
www.brainshospital.com

24/7 Helpline +91 9148080000

allowing for rapid and accurate assessment of injuries. Surgical innovations, including minimally invasive procedures and advanced instrumentation, have improved surgical outcomes and reduced patient morbidity and mortality. Additionally, critical care monitoring and support systems have enhanced the management of severely injured patients in intensive care units (ICUs).

## Evidence-Based Practices and Education

The adoption of evidence-based guidelines and protocols has standardized trauma care practices, ensuring that patients receive optimal treatment based on the latest scientific evidence. Education and training programs for healthcare professionals involved in trauma care have become more rigorous and specialized, equipping providers with the knowledge and skills necessary to deliver high-quality care. Simulation training, interdisciplinary collaborations, and ongoing research efforts continue to drive innovation and improvement in trauma care services.

## Conclusion

The history of trauma care services in hospitals is a testament to human innovation, collaboration, and the relentless pursuit of excellence in patient care. From ancient civilizations to modern healthcare systems, the evolution of trauma care reflects a journey of continuous improvement driven by advancements in medical science, technology, and the organization of healthcare delivery. As we look to the future, the legacy of those who have dedicated their lives to saving and improving the lives of trauma patients serves as inspiration to continue pushing the boundaries of what is possible in the field of trauma care.



Special Article

**Dr. Oshin**
ENT Surgeon,
BRAINS superspeciality hospital



# Gastric Reflux and ENT Health !!!

Acid reflux, a common digestive disorder, often goes beyond the discomfort in the stomach. Surprisingly, it can have a significant impact on your ears, nose, and throat (ENT) health. In this article, we'll explore the link between acid reflux and various ENT issues, shedding light on the importance of recognizing and managing this connection.

## The Basics of Acid Reflux:

Acid reflux occurs when stomach acid flows back into the food pipe causing irritation and discomfort. This condition is known for causing heartburn, chest pain, and regurgitation. However, its influence extends beyond the digestive system.

## Laryngopharyngeal Reflux (LPR):

One of the lesser-known consequences of acid reflux is Laryngopharyngeal Reflux or LPR. This occurs when stomach acid reaches the throat and even the nasal passages, leading to a range of ENT problems.

## Symptoms to Watch For:


Recognizing the symptoms of LPR is crucial for early intervention. Patients may experience chronic cough, hoarseness, throat clearing, and a feeling of a lump in the throat. These symptoms often mimic other ENT issues, making it essential to consider acid reflux as a potential cause.

## Impact on the Throat and Vocal Cords:

The acidic content that reaches the throat can cause inflammation and irritation. Prolonged exposure may lead to changes in the voice, chronic throat irritation, and even the development of vocal cord nodules or polyps.

## Ear Issues Related to Acid Reflux:

Believe it or not, acid reflux can also affect the ears. Eustachian tube dysfunction, a condition in which the tube connecting the middle ear to the back of the nose doesn't function properly, can be aggravated by acid



reflux. This dysfunction may contribute to ear pain, pressure, and even hearing loss.

## Preventive Measures and Treatment:

**Managing acid reflux is not only vital for digestive health but also for preventing ENT complications.**

### 1. Dietary Adjustments:

- **Avoid trigger foods like citrus, chocolate, and spicy items.**
- **opt for smaller, frequent meals.**

### 2. Lifestyle Changes:

- **Maintain a healthy weight through diet and exercise.**
- **Avoid eating close to bedtime.**

### 3. Positional Strategies:

- **Elevate the head of the bed by 6-8 inches while sleeping**

### 4. Hydration Habits:

- **Stay hydrated with water, the best beverage choice.**


### 5. Smoking Cessation:

- **Quit smoking to strengthen the lower esophageal sphincter.**

### 6. Stress Management:

- **Practice stress-reducing techniques like yoga and meditation.**






### 7. Clothing Choices:

- **Avoid tight belts or waistbands.**

### 8. Posture During and After Meals:

- **Remain upright after meals, avoiding lying down immediately.**

### 9. Identify Other Health Conditions:

- **Address contributing factors like hiatal hernias or obesity.**

### 10. Consult Healthcare Professional:

- **Regular check-ups for personalized advice and treatment.**

### Conclusion:

Understanding the link between acid reflux and ENT issues empowers individuals to take proactive steps in managing their health. By recognizing the symptoms and seeking timely intervention, you can mitigate the impact of acid reflux on your ears, nose, and throat, ensuring a better quality of life. If in doubt, always consult with an ENT specialist for personalized advice and guidance. ■

Sannidhi


Dr N.K. Venkataramana

# An erudite scholar and compassionate Guru Sri Jayendra Puri Mahaswamiji

RajaRajeswari temp,e and the Mutt is a well known land mark in Bangalore, especially on the Mysore Road. Based on this a huge residential colony got established as RajaRajeswari nagar over time. His Holiness Sri Jayendra Puri swamiji, a spiritual Guru, is a disciple of His Holiness Sri Tiruchi Mahaswamigal, who was a disciple of His Holiness Sri Shivapuri Baba.

Sri Tiruchi Swamiji established Sri Kailash Ashrama in April 1960. Apparently he had a Darshan of goddess Raja Rajeswari devi and got inspired to build the Kailash Ashram. He had a huge following. He was spiritually quite advanced and provided guidance and training to many Swamijis of various mutts. Presently Sri Jayendra Puri is the Peethadhipathi and chief pontiff of Sri Kailash Ashrama Mahasamsthana Trust and all its affiliates . Born on 20th of October 1960, grew up,learning scriptures and transformed into an auspicious blessing for humanity. Right from infancy, swamiji experienced success in all aspects of life. Yet something was missing as there was a strange hollowness. His first exposure to Hindu scriptures was at the age of 27. What was amazing was that when Sri Swamiji read the scriptures for the first time, he felt as though they were known to him and seemed so familiar. Gradually the apparent void began to fill. That has driven him to spiritual path and then the destiny driven his way to Sri Kailash Ashrama in 1987, to seek guidance on the divine path from Sri Tiruchi Mahaswamiji . At the very first instance in the presence of Tiruchi Swamiji he realised immediately that he had found his Guru in him. The inner feeling was There was not an iota of doubt or conflict in his mind. Sri Jayendrapuri swamiji then humbly expressed his innate desire of life is to experience the the divinity and beauty of the Divine Mother. To achieve the goal he felt total renunciation in the form of sanyasa was essential or mandatory. Listening his desire and looking at his strong commitment Sri Tiruchi swamiji asked him to stay in the Ashram and continue his Sadhana. He requested swamiji to initiate him into spirituality. However the swamiji told him to wait for his turn. A month later, swamiji has guided him to Haridwar to learn Sanskrit and the Scriptures and to be there in service to his holiness Sri Acharya Mahamandaleshwar Swami Prakashanandji Maharaj. Just before he started he was inducted into the system and tradition with the robes of brahmacharya. He lived in Haridwar and North India for sevenand-a-half years.


Early in 1989, before the Allahabad Kumbh Mela, he wrote to Sri Tiruchi Seamiji, again seeking for proper initiation into sanyasa. Sri Tiruchi swamiji finally gave permission with instructions that the ceremony in Haridwar will be conducted by Sri Tiruchi swamiji himself as his Guru. Accordingly he was formally initiated.In Haridwar, Sri Jayendra Puri Mahaswamiji kept to himself and performed his disciplines well. On completing his duties and study, he returned to Sri Kailash Ashrama Mahasamsthana to serve Devi Sri Rajarajeshwari Mata and his Guru, His Holiness Sri Tiruchi swamiji. On 11th December 2003, Sri Jayendra Puri was annointed by His Holiness Sri Tiruchi swamiji as the Peethadipathi of Sri Kailiash Ashrama Mahasamsthana. When His Holiness Sri Tiruchi Mahaswamigal was asked why he chose Sri Jayendra Puri Swami as his successor, he said “Sri



Jayendra Puri Swami is well educated and dedicated to Sadhana. Along with a thorough knowledge of the shastras, he carries on the tradition of the ashram with complete devotion. He is compassionate. He has concern for the poor and works for the welfare of everyone. He is calm and composed. He understands our sampradaya (spiritual lineage)." Everyone felt blessed to have witnessed their Guru's ordinance in the form of a most worthy successor in Sri Jayendra Puri. Sri Jayendra Puri Seamiji has a special gift of the gab for languages and therefore bhe can speak in all the South Indian dialects, as well as Sanskrit and Hindi fluently. He has native fluency in English, German and Italian.

## SRI SWAMIJIS MISSION AND WORK

Sri Mahaswamiji's conviction is that Bharatiya sanskriti is the panacea to all afflictions in all aspects of human life. Consequently, his sole aim is to revive the glorious heritage of Bhartiya sanskriti in its totality with due respect and regard for all other world cultures. His mission is to present the goodness of all the cultures to the entire mankind in such a manner that everyone respects the other tradition regardless of geographic, ethnic, linguistic or any other difference and finally to attain the Supreme in all glory. Towards this endeavour, he has chosen to pursue with vigour, chosen the elements, namely EDUCATION, ETHOS & ENVIRONMENT as imperative towards building a totally integral and holistic world. EDUCATION & ETHOS: He strongly believes that the successful way to building a futuristic India "Bhavya Bharata Bhavishyam" and seeking to re-instate our glorious sanskriti & heritage is by developing an ethos that inculcates the dharmic values prescribed in Scriptures while simultaneously providing quality modern education with all necessary infrastructure. Going further, this opportunity needs to be provided to people of all classes irrespective of background and social strata. The Mahasamsthana is steadily endeavouring to bring this concept to reality over the past few decades. The Trust has nine educational institutions under its umbrella committed towards ensuring quality education to all. The Sri Rajeshwari Vidyashala, Bengaluru, a Kannada medium school with a very minimal token fee structure operational since 1961. Sri Jnanakshi Vidyaniketan, Bengaluru, a CBSE English medium school; Sri Rajeshwari Montessori, Bengaluru; Shubodaya, Bengaluru, a school for the differently abled; Sri Rajeshwari Samskrita Vedagama Mahapathashala, Bengaluru, excellence in Vedic studies since 1974; Sri Rajeshwari Vidyaniketan, Devarapura, and a school for tribal children of coffee plantation workers in Coorg; Sri Sharada Devi Vidyasala. Salubrious environment created in each of these institutions brings forth the natural vitality of the children and allows them to explore their true potential not only in academics but also in fine arts, sports and other extra-curricular activities. Continuous care is taken by the Trust under the guidance of Swamiji to inculcate the dharmic values and morals through a vibrant use of the medium



of fine arts. The schools have an energetic alumni who actively participate in the school and individual child development despite maintaining their own hectic schedules. The Mahasamsthana has been running Sri Rajarajeshwari Samskrita Mahapathashala since 1974 that has been providing an ideal atmosphere to train aspirants to become priests and monks well-versed in all Acharas (observances) & Niyamas (stipulations) of Vedas, Agamas & Shastras. One of the most enterprising and exhilarating elements of the Pathashala is the co-existence of Shaivite and Vaishnavite bramhacharis who pursue their own stream while living together under a single roof from a very young age of 7 years onwards.

The opportunity to pursue their own sampradaya is a highly unusual trait and swamiji is personally involved in their education, monitoring and also conducting classes by allocating time from his ever hectic schedules. While educating a child is critical, the spreading of awareness of Bharatiya sanskriti and Sanatana Dharma to one and all is his of prime concern. The break-up of traditional joint family system leading to nuclear families and working parents has, over the passage of time, led to generations with limited, often imperfect understanding of the nuances of our Sanskrit language. The journal, Bhavya Bharata Bhavishyam or BBB, is an endeavour in this direction. The publications cover a range of domains from Hitopadesha –tales on moral values, to Granthas & Shastras elucidated by swamiji in simple language explaining complex matters of the mind and its myriad mysteries. Regular discourses on sacred texts like Sri Bhagavat Gita, Sri Devi Bhagvatam, Srimad Bhagvatam, Sri Ramacharita Manas, Atma Bodha are conducted by sri Seamiji to a wide interested audience across all age groups with a sole objective of seeding our ancient traditions and wisdom, particularly at Gundlukottur; Sri Rajeshwari Vidyaniketan, Hulkoti; and, Sri Kailash Asrama Vedpathshala, Ravanasamudram. Teaching is meant to mould young minds, with a vision of a "Right Life" with apt opportunities for practice. In an effort to reach a wider audience of devotees spread all over the world, Sri Swamiji conducts daily Satsang on specific topics, relevant to today's environment and contemporary challenges. Topics ranging from conduct of one's life to addressing queries on rituals and practices to educating the audience on importance of faith and devotion to the Supreme. These Satsang's are recorded and uploaded onto the Mahasamsthana's YouTube channel on a regular basis accessible to all.

The core message of all elucidation of Sri Seamiji is "not loose sight of one's original identity in the pursuit of prosperity and glory coupled with adoption of several identities".

Devotees say that learning from Sri Swamiji is a truly divine and blessed experience as he teaches complex subjects in a simple and practical way making the seeker feel at home. He is well versed with the subject , quite erudite and has a characteristic way of presenting with simplified anecdotes.

## ENVIRONMENT:

Swamiji always conveys that Bharatiya Sanskriti has the concept of Vasudhaivakutumbakam as it's firmament. That the universe comprises of many living and non-living elements which need to co-exist in harmony has been the core of this divine concept of creation. Disturbing the ways of Mother Nature has a debilitating consequence on the entire life forms. Humanity has a huge responsibility in not only maintaining this delicate balance but also in energetically re-inforcing the preserves of various life forms, flora, fauna across the land, air and water. Swamiji fosters the return of human consciousness to Mother Nature and her balance of manifestations. Towards this end, across all branches under his guidance, serious efforts are underway to practically implement organic farming while simultaneously spreading awareness in agriculturists about the consequences of over exploiting the farm land which leads to a life devoid of health and nutrition.

Avoidance of chemical fertilisers and pesticides is strictly followed in the Ashrama and the abounding vegetation that one sees in the Ashrama testifies the success of these techniques. Visitors can have a visual feast in the Ashrama of the vermicompost, biogas, drip irrigation, rain water harvesting and water recycling resulting in a total rejuvenation of innumerable coconut trees. Many devotees have been inspired by swamiji to adopt a simple, organic and healthy diet with illustrative experiences of the efficacy of the same. Waste management and conversion of biodegradable waste, predominantly food & kitchen waste has been identified as an area of focus and has encouraged the Mahasamsthana and all its devotees in doing their bit towards environmental conservation. Converting organic waste into organic manure and preserving local environments by reducing landfills and associated civic issues has become a key concern for the organisation. Another illustrious example towards environment is the marked focus on renewable energy. Many establishments under the aegis of this institution invested on their roof top solar projects, grid connected or standalone units, generating and supplying the power to various establishments.

Plastic waste, predominantly carry bags, accumulated in the institutions is meticulously collected and sent to recycling industries. He is very much clear in the concept of reduction of concrete constructions. He always presents alternatives which are in the form of sustainable constructions . He constantly encourages discussions in the field of alternative infrastructure and encourages practical implementations of the same where ever feasible.


The Sri Shivaratnapuri Temple of Health, a tri-pyramidal abode of well being, envisioned to reality by Swamiji is the first of its kind hospital in the world in the form of a pyramid offering multiple systems of medicine and therapies under one roof with a sole purpose of offering holistic health with an emphasis on prevention rather than having illness . So that freedom from medications as well as suffering by encouraging wellness. Constructed under his guidance to every detail, it is a 1/5th scaled replica of The Great Pyramid of Egypt and the first pyramidal construction in the world without steel or metal reinforcements. The construction is mind boggling, in sheer sweep, scale and structure, with regard to the concepts. One can only marvel at the tremendous fount of energy and vitality that Swamiji invests in such efforts which has a significant positive bearing on local environments. The devotees of Sri Kailash Ashrama Mahasamsthana are indeed blessed to be guided by His Holiness Sri Sri Sri Jayendra Puri Mahaswamiji, a glowing personality, radiating the tenets of Sanatana Dharma in all its glory to all mankind with the objective of achieving bliss for all through Bhakti (dedication) & Mukti (liberation).

Swamiji is quite learned and yet very much approachable. I had several interactions on varied topics. His depth of knowledge and understanding is remarkable. He is a profound Devi Upasaka and Sri Vidya upasaka. He has published several books and contributed in publishing many spiritual books. The book "Tripura Rahasyam" a treatise on Devi and her magnificent role in creation is the greatest contribution.

The temple Of Goddess Sri RajaRajeswari is very unique in many ways. The Rajagopuram, stone construction, large stone pillars gives a traditional hindu appearance and speaks the glory of our temple culture. The sanctum located at a height with goddess seated on looking the devotees makes it energetic and blissful. All around the the other goddesses of Dasa Mahavidya were depicted in the perambulation corridor. Several rituals keep happening in the temple on a regular basis. The Ashram campus it self is quite serene and self sufficient. The gardens behind, the Goshala, the pyramid meditation hall amidst greenery, the lush green fields cultivating vegetables, paddy and flowers, with birds chirping all the time and habitat for many animals adds to the natural beauty and classical atmosphere of a traditional ashram in the midst of the city. ■

*A book titled*


***Brain Attack- Facts & Realities***




authored by renowned Neurosurgeon, Founder Chairman & Director Neurosciences, Brains Hospitals, **Dr. N K Venkataramana,** is now available for sale. This book is one of its kind providing comprehensive information about stroke, brain hemorrhage, venous stroke and all associated emergencies in a simple format understandable to people of all walks of life. Enjoy reading and empower yourself with knowledge to help the society. The book priced at Rs. 225 is now available on Amazon.

ಡಾ. ಎನ್.ಕೆ. ವೆಂಕಟರಮಣ ಅವರ

**ಮಿದುಳಿನ ಆಘಾತ ವಾಸ್ತವಾಂಶಗಳು**




ಗ್ರಂಥ ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಸಿದ್ಧವಾಗಿ ಮಾರುಕಟ್ಟೆಯಲ್ಲಿದೆ. ಕನ್ನಡ ಪುಸ್ತಕವನ್ನು ಬೆಂಗಳೂರಿನಲ್ಲಿರುವ ಖ್ಯಾತ ಪ್ರಕಾಶಕರಾದ ಸಪ್ನ ಬುಕ್ ಹೌಸ್, ಇವರು ಪ್ರಕಟಿಸಿದ್ದಾರೆ. ಮುಖಬೆಲೆ 195. ಪುಟಗಳು 225. ಇಂಗ್ಲಿಷ್ ಆವೃತ್ತಿಯನ್ನು ಬ್ರೈನ್ಸ್ ಆಸ್ಪತ್ರೆ ಇವರು ಪ್ರಕಟಿಸಿದ್ದು ಬೆಲೆ 225. ಎಂಟು ಪುಟಗಳ ವರ್ಣಚಿತ್ರವಿದೆ. ಎಲ್ಲಾ ಪುಟದಲ್ಲೂ ಆಯಾಯ ವಿಷಯಕ್ಕೆ ತಕ್ಕಂತೆ ಕಪ್ಪು-ಬಿಳುಪು ಚಿತ್ರಗಳಿವೆ. 'ಲಕ್ವ' 'ಪಾರ್ಶ್ವವಾಯು' 'ಸ್ಟ್ರೋಕ್ ' ಮುಂತಾದ ಹೆಸರುಗಳಿಂದ ಕರೆಯುವ ಈ ಭಯಂಕರ ಕಾಯಿಲೆಯ ಬಗ್ಗೆ ತಿಳಿಯಲು, ಅದರಿಂದ ದೂರವಿರಲು ಹಾಗೂ ಈಗಾಗಲೇ ಬಾಧಿತರಾದವರನ್ನು ರಕ್ಷಿಸಲು ಈ ಗ್ರಂಥ ಅತ್ಯಂತ ಉಪಯುಕ್ತವಾಗಿದೆ. ಇದರ ಪ್ರತಿಗಳು ಅಮೆಜಾನ್‌ನಲ್ಲೂ ದೊರೆಯುತ್ತದೆ.

ವಿಶೇಷ ಲೇಖನ

ಡಾ. ಅಶ್ವಿತ್
ಇಆರ್ ಫಿಸಿಷಿಯನ್
ಬ್ರೈನ್ಸ್ ಆಸ್ಪತ್ರೆ



# ಆಸ್ಪತ್ರೆಗಳಲ್ಲಿ ಶುಶ್ರೂಷೆ ಸೇವೆಯ ಬೆಳವಣಿಗೆ: ಕಾಲಾನುಕ್ರಮದಲ್ಲಿ ನಡೆದು ಬಂದ ರೀತಿ

ಪ್ರಾಚೀನ ಕಾಲದ ಯುದ್ಧಭೂಮಿಗಳಿಂದ, ಆಧುನಿಕ ಕಾಲದ ಆಸ್ಪತ್ರೆಯ ಕೊಠಡಿಗಳಲ್ಲಿ ಚಿಕಿತ್ಸೆ ನೀಡುವವರೆಗೆ ಶುಶ್ರೂಷೆ ಸೇವೆ ಬೆಳೆದು ಬಂದಿರುವ ರೀತಿಯು ಮಾನವ ಕುಲದ ಚತುರತೆ, ಪುನಶ್ಚೇತನ ನೀಡಲು ಮತ್ತು ಜೀವ ಉಳಿಸಲು ಹೋರಾಡುವ ಗುಣಗಳಿಗೆ ಉತ್ತಮ ಉದಾಹರಣೆಯಾಗಿದೆ. ಸಹಸ್ರಮಾನಗಳಿಂದ ವೈದ್ಯಕೀಯ ಸೇವೆಯಲ್ಲಿ ಆಗಿರುವ ಸಂಶೋಧನೆ, ಜ್ಞಾನಾರ್ಜನೆ, ತಂತ್ರಜ್ಞಾನದ ಬಳಕೆ ಮತ್ತು ಆರೋಗ್ಯ ವ್ಯವಸ್ಥೆಗಳು ಬೆಳೆದು ನಿಂತಿರುವ ರೀತಿ ಅಚ್ಚರಿ ಮೂಡಿಸುತ್ತದೆ.

## ಪ್ರಾಚೀನ ಪದ್ಧತಿ ಮತ್ತು ಸೇನೆಯ ಪ್ರಭಾವ

ಪ್ರಾಚೀನ ನಾಗರಿಕತೆಗಳ ಇತಿಹಾಸವನ್ನು ತಿರುವಿ ಹಾಕಿದರೆ ಶುಶ್ರೂಷೆ ಸೇವೆಯ ಉಗಮ ನಮಗೆ ತಿಳಿದು ಬರುತ್ತದೆ. ಗಾಯಾಳುಗಳ ಗಾಯವನ್ನು ವಾಸಿ ಮಾಡಲು ಮೂಲಭೂತ ಚಿಕಿತ್ಸೆ ಮತ್ತು ಗಾಯಾಳುಗಳ ಶುಶ್ರೂಷೆಗೆ ಬೇಕಿರುವ ವ್ಯವಸ್ಥೆ ಅಂದಿನಿಂದಲೂ ಇದೆ. ಸೇನೆಗಳ ನಡುವೆ ನಡೆಯುತ್ತಿದ್ದ ಯುದ್ಧಗಳು ಶುಶ್ರೂಷೆ ಸೇವೆಯಲ್ಲಿ ನೂತನ ಆವಿಷ್ಕಾರಗಳಿಗೆ ಮೂಲ ಕಾರಣವಾಗಿವೆ. ಏಕೆಂದರೆ, ಯುದ್ಧಭೂಮಿಗಳಲ್ಲಿ ಗಾಯಾಳುಗಳಿಗೆ ಅತ್ಯಂತ ತ್ವರಿತ ಮತ್ತು ಪರಿಣಾಮಕಾರಿ ಚಿಕಿತ್ಸೆ ನೀಡಬೇಕಾದ ಅಗತ್ಯ ಇರುತ್ತಿತ್ತು. ಇತಿಹಾಸದುದ್ದಕ್ಕೂ ಸೇನಾ ಶಸ್ತ್ರಚಿಕಿತ್ಸಕರು ಮತ್ತು ವೈದ್ಯರು, ಶಸ್ತ್ರಚಿಕಿತ್ಸೆಯಲ್ಲಿ ಹೊಸ ಹೊಸ ಆವಿಷ್ಕಾರಗಳನ್ನು ಮಾಡಿದ್ದಾರೆ. ಹೊಸ ರೀತಿಯ ಚಿಕಿತ್ಸಾ ಪದ್ಧತಿಗಳನ್ನು ಅಭಿವೃದ್ಧಿಪಡಿಸಿದ್ದಾರೆ. ಅಲ್ಲದೇ, ಗಾಯಾಳು ಸೈನಿಕರ ಚಿಕಿತ್ಸೆಗೆ ಅಗತ್ಯವಾದ ವೈದ್ಯಕೀಯ ಸೇವೆಗಳನ್ನು ಒದಗಿಸಿದ್ದಾರೆ.



## ಗಾಯಾಳುಗಳಿಗೆ ತ್ವರಿತ ವೈದ್ಯಕೀಯ ನೆರವು ನೀಡುವಿಕೆ

ವೈದ್ಯಕೀಯ ಭಾಷೆಯಲ್ಲಿ ಇದನ್ನು "ಗೋಲ್ಡನ್ ಅವರ್" ಅಥವಾ "ಬಂಗಾರದಂತಹ ಸಮಯ" ಅಥವಾ "ಅತ್ಯಮೂಲ್ಯ ಸಮಯ" ಎಂದು ಕರೆಯಲಾಗುತ್ತದೆ. ಯಾವುದೇ ವ್ಯಕ್ತಿ ಗಾಯಗೊಂಡ ಮೊದಲ ಒಂದು ಗಂಟೆ ಅವಧಿಯಲ್ಲಿ ತ್ವರಿತ ಚಿಕಿತ್ಸೆ ನೀಡಿದರೆ, ರೋಗಿಯ ದೇಹದ ವಿವಿಧ ಅಂಗಾಂಗಳಿಗೆ ಆಗುವ ಹಾನಿಯನ್ನು ತಡೆಯಲು ಬಹಳ ಅನುಕೂಲವಾಗುತ್ತದೆ. ಉದಾಹರಣೆಗೆ ಯಾವುದೇ ವ್ಯಕ್ತಿಯಲ್ಲಿ ಅತ್ಯಧಿಕವಾಗಿ ರಕ್ತಸ್ರಾವ ಆಗುತ್ತಿದ್ದರೆ, ಆ ವ್ಯಕ್ತಿಯನ್ನು ಬದುಕಿಸಲು ರಕ್ತಸ್ರಾವವನ್ನು ನಿಲ್ಲಿಸುವುದು ಅಥವಾ ರಕ್ತಸ್ರಾವದ ತೀವ್ರತೆ ಕಡಿಮೆ ಮಾಡುವುದು ಅತ್ಯಾವಶ್ಯಕವಾಗಿರುತ್ತದೆ.




ಮಿದುಳಿನ ಅಲೆ


- ಡಾ.ಎನ್.ಕೆ. ವೆಂಕಟರಮಣ

### ನರಕೋಶಗಳ ನಾಶ
### ಕಾಯಿಲೆ ಮತ್ತು ಕಾಳಜಿ



ಮುಂಬರುವ ದಿನಗಳಲ್ಲಿ ನರಕೋಶಗಳ ನಾಶಕ್ಕೆ ಸಂಬಂಧಿಸಿದ ರೋಗ ಪ್ರಕರಣಗಳು ತೀವ್ರವಾಗಿ ಹೆಚ್ಚಾಗುವ ಅಂದಾಜಿದೆ. ಅಧಿಕ ಉರಿಯೂತದ ಸಮಸ್ಯೆಯಿಂದ ಬಾಧಿತರಾಗುವ 40 ರಿಂದ 50 ವರ್ಷ ವಯಸ್ಸಿನವರು, ನಂತರದ ವರ್ಷಗಳಲ್ಲಿ ಮಿದುಳಿನ ಗಾತ್ರ ಕುಗ್ಗುವ ಅಪಾಯ ಎದುರಿಸಬೇಕಾದ ಸಾಧ್ಯತೆ ಹೆಚ್ಚಾಗಿರುತ್ತದೆ ಎಂಬುದು ದೃಢಪಟ್ಟಿದೆ. ಗ್ಯಾಸ್ಟ್ರೋ ಈಸೋಫ್ಯಾಗಸ್ ರಿಫ್ಲಕ್ಸ್ ಡಿಸೀಸ್ (ಪಿತ್ಥರಸವು ಅನ್ನನಾಳದ ಕೊಳವೆಯಲ್ಲಿ ಉರಿ ಉಂಟುಮಾಡುವುದು), ನಿದ್ರಾಹೀನತೆ, ಆಂತರಿಕ ಒತ್ತಡ, ಅಧಿಕ ರಕ್ತದೊತ್ತಡ, ಹೆಚ್ಚಿನ ಕೊಲೆಸ್ಟೆರಾಲ್, ಅಧಿಕ ಮಧುಮೇಹ, ರುಮಟಾಯ್ಡ್ ಅರ್ಥ್ರೈಟಿಸ್, ಎಚ್ಐವಿ, ಸೋರಿಯಾಸಿಸ್ ಇತ್ಯಾದಿಗಳ ಮಧ್ಯವಯಸ್ಸಿನಲ್ಲಿ ಕಂಡುಬರುವ ಉರಿಯೂತಕ್ಕೆ ಪ್ರಮುಖ ಕಾರಣಗಳಾಗಿರುತ್ತವೆ. ಮಧ್ಯವಯಸ್ಸಿನಲ್ಲಿ ಈ ಬಾಧೆಗಳನ್ನು ಸೂಕ್ತವಾಗಿ ನಿಯಂತ್ರಣದಲ್ಲಿ ಇರಿಸಿಕೊಂಡರೆ ನಂತರದ ವರ್ಷಗಳಲ್ಲಿ ಕಂಡು ಬರಬಹುದಾದ ಅಲ್ಝೀಮರ್ಸ್ ಹಾಗೂ ಇನ್ನಿತರ ನರಕೋಶಗಳ ನಾಶ ಮಾಡುವ ಕಾಯಿಲೆಗಳಿಂದ ಪಾರಾಗಬಹುದು ಎಂಬುದು ಸಂಶೋಧನೆಗಳಿಂದ ತಿಳಿದುಬಂದಿದೆ.

■ ಕನ್ನಡಕ್ಕೆ: belaguli.venkata@gmail.com




## ಆಸ್ಪತ್ರೆಗಳ ಸ್ಥಾಪನೆಯ ಆವಶ್ಯಕತೆ

ಈಜಿಪ್ಟ್, ಗ್ರೀಸ್, ರೋಮ್‌ನಲ್ಲಿ ಪ್ರಾಚೀನ ಕಾಲದಿಂದಲೂ ಆಸ್ಪತ್ರೆಗಳ ನಿರ್ಮಾಣ ಮಾಡುವ ಮೂಲಕ ವ್ಯವಸ್ಥಿತವಾಗಿ ವೈದ್ಯಕೀಯ ಸೇವೆ ಒದಗಿಸಲು ಒತ್ತು ನೀಡಿರುವುದಕ್ಕೆ ಹಲವಾರು ಉದಾಹರಣೆಗಳು ಸಿಗುತ್ತವೆ. ಆದರೆ, ಈ ಆಸ್ಪತ್ರೆಗಳಲ್ಲಿ ರೋಗಿಗಳ ಚಿಕಿತ್ಸೆಗೆ ಆದ್ಯತೆ ನೀಡಲಾಗುತ್ತಿತ್ತು. ಶುಶ್ರೂಷೆ ಸೇವೆಯಲ್ಲಿ ಕಡಿಮೆ ಪ್ರೌಢಿಮೆಯನ್ನು ಹೊಂದಲಾಗಿತ್ತು. 19ನೇ ಶತಮಾನದಲ್ಲಿ ಆಧುನಿಕ ಶಸ್ತ್ರಚಿಕಿತ್ಸಾ ವಿಧಾನವನ್ನು ಕಂಡುಹಿಡಿದ ಬಳಿಕ ಮತ್ತು ಅನಸ್ತೇಷಿಯಾ ಹಾಗೂ ನಂಜುನಿರೋಧಕಗಳು ಬಳಕೆಗೆ ಬಂದ ಬಳಿಕ, ಆಸ್ಪತ್ರೆಗಳಲ್ಲಿ ಶುಶ್ರೂಷೆ ಸೇವೆಯಲ್ಲಿ ವಿಶಿಷ್ಟ ರೀತಿಯಲ್ಲಿ ಚಿಕಿತ್ಸೆ ನೀಡುವ ಪದ್ಧತಿಯನ್ನು ಅಳವಡಿಸಿಕೊಳ್ಳಲಾಗಿದೆ.

## ಶುಶ್ರೂಷೆ ಸೇವಾ ಕೇಂದ್ರಗಳ ಹುಟ್ಟು

1966ರಲ್ಲಿ ಅಮೆರಿಕದ ರಾಷ್ಟ್ರೀಯ ವಿಜ್ಞಾನ ಸಂಸ್ಥೆ, "ಅಪಘಾತಗಳಿಂದ ಸಾವು ಮತ್ತು ಅಂಗವೈಕಲ್ಯ: ಆಧುನಿಕ ಸಮಾಜದಲ್ಲಿ ನಿರ್ಲಕ್ಷಿಸಲಾಗಿರುವ ರೋಗ" ಎಂಬ ವರದಿಯಲ್ಲಿ ಮಾರಣಾಂತಿಕ ಗಾಯಗಳನ್ನು ರಾಷ್ಟ್ರೀಯ ಜಾಡ್ಯ ಎಂದು ಕರೆಯಿತು. ಶುಶ್ರೂಷೆ ಸೇವೆಯ ಬೆಳವಣಿಗೆಗೆ ಈ ವರದಿ ಮಹತ್ತರ ತಿರುವು ನೀಡಿತು. 20ನೇ ಶತಮಾನದ ಮಧ್ಯಭಾಗದ ಬಳಿಕ ಆಸ್ಪತ್ರೆಗಳಲ್ಲಿ ಶುಶ್ರೂಷೆ ಸೇವೆಗೆ ಪ್ರತ್ಯೇಕ ಕೊಠಡಿಗಳನ್ನು ಸ್ಥಾಪಿಸಲು ಒತ್ತು ನೀಡಲಾಯಿತು. ಹೀಗಾಗಿ ಈ ಅವಧಿಯನ್ನು ಶುಶ್ರೂಷೆ ಸೇವೆಗಳ ಇತಿಹಾಸದಲ್ಲಿ ಇದೊಂದು ಮರೆಯಲಾದ ಘಟ್ಟ ಎಂದು ಪರಿಗಣಿಸಲಾಗುತ್ತದೆ. ಈ ವಿಶೇಷ ಘಟಕಗಳಲ್ಲಿ ಶುಶ್ರೂಷೆ ಸೇವೆಯಲ್ಲಿ ಮುಂದುವರಿದ ತಂತ್ರಜ್ಞಾನವನ್ನು ಅಳವಡಿಸಲಾಯಿತು. ಜೊತೆಗೆ ಪ್ರತ್ಯೇಕ ತಂಡಗಳನ್ನು ಶುಶ್ರೂಷೆ ಸೇವೆ ನೀಡಲು ಮೀಸಲಿಡಲಾಯಿತು. ಗಂಭೀರವಾಗಿ ಗಾಯಗೊಂಡವರಿಗೆ ಚಿಕಿತ್ಸೆ ನೀಡಲೆಂದೇ ಪ್ರತ್ಯೇಕವಾಗಿ ವಿಶೇಷ ಸೌಲಭ್ಯಗಳನ್ನು ಒದಗಿಸಲಾಯಿತು. ಅಮೆರಿಕದ ಬಾಲ್ಟಿಮೋರ್‌ನಲ್ಲಿರುವ ಮೇರಿಲ್ಯಾಂಡ್ ವಿಶ್ವವಿದ್ಯಾಲಯದ ವೈದ್ಯಕೀಯ ಕೇಂದ್ರದಲ್ಲಿ 1966ರಲ್ಲಿ ಮೊಟ್ಟ ಮೊದಲ ಶುಶ್ರೂಷೆ ಸೇವೆ ಘಟಕವನ್ನು ಆರಂಭಿಸಲಾಯಿತು. ಈ ಮೂಲಕ ಶುಶ್ರೂಷೆ ಸೇವೆಯಲ್ಲಿ ಕ್ರಾಂತಿಕಾರಕ ಬದಲಾವಣೆ ಮಾಡುವ ನಿಟ್ಟಿನಲ್ಲಿ ಮೊದಲ ಹೆಜ್ಜೆ ಇಟ್ಟಂತಾಯಿತು.

## ತುರ್ತು ವೈದ್ಯಕೀಯ ಸೇವೆಯಲ್ಲಿ ಆಗಿರುವ ಪ್ರಗತಿ

ವ್ಯವಸ್ಥಿತವಾಗಿ ತುರ್ತು ವೈದ್ಯಕೀಯ ಸೇವೆ ನೀಡುವ ವ್ಯವಸ್ಥೆಯಲ್ಲಿ ಕ್ರಾಂತಿಕಾರಕ ಬದಲಾವಣೆ ಆದ ಪರಿಣಾಮ ಗಾಯಾಳುಗಳಿಗೆ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡುವ ಮುನ್ನ ಪ್ರಥಮ ಚಿಕಿತ್ಸೆ ನೀಡುವ ವ್ಯವಸ್ಥೆ ಬೆಳೆದು ಬಂದಿದೆ. ಆಂಬುಲೆನ್ಸ್‌ಗಳು, ಅರೆವೈದ್ಯಕೀಯ ಸಿಬ್ಬಂದಿ ಮತ್ತು ತುರ್ತು ಸಂಚಾರ ವ್ಯವಸ್ಥೆ ನಿಯಮಗಳು ತುರ್ತು ಚಿಕಿತ್ಸೆಯ ಭಾಗಗಳಾಗಿ ಮಾರ್ಪಾಡಾಗಿವೆ. ಈ ಮೂಲಕ ಯಾವುದೇ ಒಬ್ಬ ವ್ಯಕ್ತಿ ಗಾಯಗೊಂಡ ಕ್ಷಣದಿಂದ ಮತ್ತು ಸ್ಥಳದಿಂದ ಆಸ್ಪತ್ರೆಗೆ ಬರುವವರೆಗೆ ಚಿಕಿತ್ಸೆ ಸಿಗುವಂತೆ ಮಾಡುವಲ್ಲಿ ಇವು ಯಶಸ್ವಿಯಾಗಿವೆ. ಶುಶ್ರೂಷೆ ಸೇವೆ ಮತ್ತು ಇತರ ಆರೋಗ್ಯ ವ್ಯವಸ್ಥೆಗಳ ಜೊತೆಗೆ ತುರ್ತು ವೈದ್ಯಕೀಯ ಸೇವೆಯನ್ನು ಒಗ್ಗೂಡಿಸಿರುವುದರಿಂದ ಸಮರ್ಪಕವಾಗಿ ಮಾಹಿತಿ ವಿನಿಯಮ ಮಾಡಿಕೊಳ್ಳಲು ಮತ್ತು ಶುಶ್ರೂಷೆ ಸೇವೆಯಲ್ಲಿ ದಕ್ಷತೆಯನ್ನು ಹೆಚ್ಚಿಸಲು ಅನುಕೂಲ ಮಾಡಿಕೊಟ್ಟಿದೆ.

## ತಾಂತ್ರಿಕ ಆವಿಷ್ಕಾರಗಳು

ವೈದ್ಯಕೀಯ ರಂಗದಲ್ಲಿ ಆಗಿರುವ ತಾಂತ್ರಿಕ ಆವಿಷ್ಕಾರಗಳು, ಮಾರಣಾಂತಿಕ ಗಾಯಗಳ ಪತ್ತೆ ಮತ್ತು ಚಿಕಿತ್ಸಾ ಪದ್ಧತಿಯಲ್ಲಿ ಕ್ರಾಂತಿಕಾರಕ ಬದಲಾವಣೆ ತಂದಿದೆ. ಆಂತರಿಕ ಗಾಯಗಳನ್ನು ಪತ್ತೆ ಹಚ್ಚಲು ಬಳಸುವ ಸಿಟಿ ಸ್ಕ್ಯಾನ್, ಎಂಆರ್‌ಐ ಸ್ಕ್ಯಾನ್‌ಗಳಿಂದ



ಗಾಯದ ಪತ್ತೆ ಮತ್ತು ಅದು ಎಷ್ಟರ ಮಟ್ಟಿಗೆ ಮಾರಣಾಂತಿಕವಾಗಿದೆ ಎಂಬುದನ್ನು ನಿರ್ಧರಿಸುವ ಪದ್ಧತಿಯಲ್ಲಿ ಕ್ರಾಂತಿಕಾರಕ ಬದಲಾವಣೆಗಳಾಗಿವೆ. ಶಸ್ತ್ರಚಿಕಿತ್ಸೆ ಪದ್ಧತಿಯಲ್ಲಿ ಆಗಿರುವ ಆವಿಷ್ಕಾರಗಳಿಂದ, ದೇಹಕ್ಕೆ ಕಡಿಮೆ ಹಾನಿ ಮಾಡುವ ಶಸ್ತ್ರಚಿಕಿತ್ಸಾ ಪ್ರಕ್ರಿಯೆ, ಆಧುನಿಕ ಶಸ್ತ್ರಚಿಕಿತ್ಸಾ ಸಾಧನಗಳ ಬಳಕೆಯಿಂದ, ರೋಗಿಗಳ ವಿವಿಧ ಅಂಗಾಂಗಗಳಿಗೆ ಆಗುವ ಹಾನಿ ಮತ್ತು ಸಾವಿನ ಪ್ರಮಾಣವನ್ನು ತಗ್ಗಿಸಿವೆ. ತೀವ್ರ ನಿಗಾ ಘಟಕಗಳಲ್ಲಿ ಇರುವ ನಿಗಾ ವ್ಯವಸ್ಥೆ ಸಾಧನಗಳು, ಜೀವ ಸಹಾಯಕ ಸಾಧನಗಳು ಗಂಭೀರವಾಗಿ ಗಾಯಗೊಂಡವರಿಗೆ ಉತ್ತಮ ಚಿಕಿತ್ಸೆ ದೊರೆಯುವಂತೆ ಮಾಡಿವೆ.

## ಸಾಕ್ಷ್ಯಾಧಾರಿತ ಪದ್ಧತಿ ಮತ್ತು ಶಿಕ್ಷಣ

ಶುಶ್ರೂಷೆ ಸೇವೆಯ ಪದ್ಧತಿಯಲ್ಲಿ ಸಾಕ್ಷ್ಯಾಧಾರಿತ ನೀತಿ–ನಿಯಮಗಳು ಮತ್ತು ಶಿಷ್ಟಾಚಾರ ಅಳವಡಿಸಿಕೊಳ್ಳುವ ಮೂಲಕ ಏಕರೂಪದ ಪದ್ಧತಿ ರೂಪುಗೊಂಡಿದ್ದು, ರೋಗಿಗಳು ವೈಜ್ಞಾನಿಕ ಸಾಕ್ಷ್ಯಗಳ ಆಧಾರದ ಮೇಲೆ ನಿರ್ದಿಷ್ಟ ಚಿಕಿತ್ಸೆ ಪಡೆದುಕೊಳ್ಳುವಂತೆ ಜಾಗ್ರತೆ ವಹಿಸಲಾಗಿದೆ. ಶುಶ್ರೂಷೆ ಸೇವೆ ನೀಡುವ ಸಿಬ್ಬಂದಿಗೆ ಶಿಕ್ಷಣ ಮತ್ತು ತರಬೇತಿ ಕಾರ್ಯಕ್ರಮಗಳು ಕಠಿಣ ತರಬೇತಿ ನೀಡುವ ಜೊತೆಗೆ ತಜ್ಞತೆಯನ್ನು ಪಡೆದುಕೊಳ್ಳಲು ನೆರವಾಗುತ್ತಿವೆ. ಈ ಮೂಲಕ ಶುಶ್ರೂಷೆ ಸೇವೆ ನೀಡುವವರು ಅತ್ಯುತ್ತಮ ಚಿಕಿತ್ಸೆ ನೀಡಲು ಬೇಕಾದ ಜ್ಞಾನ ಮತ್ತು ಕೌಶಲ್ಯ ಬೆಳೆಸಿಕೊಳ್ಳಲು ನೆರವಾಗಿವೆ. ಅಣಕು ತರಬೇತಿ, ಅಂತರವೈದ್ಯಕೀಯ ವಿಭಾಗಗಳ ನಡುವಿನ ಸಮನ್ವಯ ಮತ್ತು ಈಗಾಗಲೇ ನಡೆಯುತ್ತಿರುವ ಸಂಶೋಧನೆಗಳ ಮೂಲಕ ಶುಶ್ರೂಷೆ ಸೇವೆಯಲ್ಲಿ ಹೊಸ ಆವಿಷ್ಕಾರಗಳು ಮತ್ತು ಪ್ರಗತಿ ಸಾಧಿಸುವ ನಿಟ್ಟಿನಲ್ಲಿ ಮಹತ್ತರ ಹೆಜ್ಜೆ ಇಡಲಾಗುತ್ತಿದೆ.

## ಕೊನೆಯದಾಗಿ

ಮಾನವರ ಸಂಶೋಧನೆ, ಸಮನ್ವಯ ಮತ್ತು ರೋಗಿಗಳಿಗೆ ಬೇಕಿರುವ ಚಿಕಿತ್ಸೆ ನೀಡುವ ನಿಟ್ಟಿನಲ್ಲಿ ಪಡುವ ಕಷ್ಟಗಳನ್ನು ಅರಿತುಕೊಳ್ಳಲು ಶುಶ್ರೂಷೆ ಸೇವೆಯ ಇತಿಹಾಸದ ಚಿತ್ರಣ ಉತ್ತಮ ಉದಾಹರಣೆಯಾಗಿದೆ. ಪ್ರಾಚೀನ ನಾಗರಿಕತೆಗಳಿಂದ ಹಿಡಿದು ಆಧುನಿಕ ಆರೋಗ್ಯ ವ್ಯವಸ್ಥೆಯವರೆಗೆ, ಶುಶ್ರೂಷೆ ಸೇವೆ ಬೆಳೆದು ಬಂದಿರುವ ರೀತಿ ವೈದ್ಯಕೀಯ ಸೇವೆಯಲ್ಲಿ ಆಗಿರುವ ನಿರಂತರ ಅಭಿವೃದ್ಧಿ, ತಂತ್ರಜ್ಞಾನದ ಬಳಕೆ ಮತ್ತು ವ್ಯವಸ್ಥಿತ ಆರೋಗ್ಯ ವ್ಯವಸ್ಥೆಯ ಸ್ಥಾಪನೆಗೆ ಆಗಿರುವ ಕ್ರಮಗಳ ಪ್ರತಿಬಿಂಬವಾಗಿದೆ. ಭವಿಷ್ಯದ ದೃಷ್ಟಿಯಿಂದ ನೋಡಿದಾಗ, ಶುಶ್ರೂಷೆ ಸೇವೆ ಬೆಳವಣಿಗೆಗೆ ಹಿಂದಿನವರು ಕೊಟ್ಟಿರುವ ಕೊಡುಗೆ, ಜೀವ ಉಳಿಸಲು ಹಲವಾರು ಜನ ಮಾಡಿರುವ ತ್ಯಾಗ ಮುಂದಿನ ದಿನಗಳಲ್ಲಿ ಈ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಆವಿಷ್ಕಾರ ಮತ್ತು ಅಭಿವೃದ್ಧಿ ಮಾಡುವ ನಿಟ್ಟಿನಲ್ಲಿ ನಾವು ಕೆಲಸ ಮಾಡಲು ಪ್ರೇರಣೆಯಾಗಿವೆ.

■ ಕನ್ನಡಕ್ಕೆ: ಬಿ.ಎಂ. ಸುನೀತಾ



ವಿಶೇಷ ಲೇಖನ

**ಡಾ. ಒಶಿನ್**

ಇಎನ್‌ಟಿ ತಜ್ಞರು,
ಬೈನ್ಸ್ ಆಸ್ಪತ್ರೆ



# ಗ್ಯಾಸ್ಟ್ರಿಕ್ ರಿಫ್ಲಕ್ಸ್ ಮತ್ತು ಇ.ಎನ್.ಟಿ. ಆರೋಗ್ಯ!!!

ಆಸಿಡ್ ರಿಫ್ಲಕ್ಸ್ ಎಂಬುದು ಸಾಮಾನ್ಯ ಜೀರ್ಣಕಾರಿ ಅಸ್ವಸ್ಥತೆಯಾಗಿದ್ದು, ಇದು ಸಾಮಾನ್ಯವಾಗಿ ಹೊಟ್ಟೆಯಲ್ಲಿನ ಅಸ್ವಸ್ಥತೆಯನ್ನು ಮೀರುತ್ತದೆ. ಆದರೆ, ಆಶ್ಚರ್ಯಕರವಾದ ಸಂಗತಿಯೆಂದರೆ, ಇದು ನಿಮ್ಮ ಕಿವಿ, ಮೂಗು ಹಾಗೂ ಗಂಟಲಿನ (ಇ.ಎನ್.ಟಿ.) ಆರೋಗ್ಯದ ಮೇಲೂ ಗಮನಾರ್ಹವಾದ ಪರಿಣಾಮ ಬೀರಬಹುದು.

ಈ ಲೇಖನದಲ್ಲಿ ಆಸಿಡ್ ರಿಫ್ಲಕ್ಸ್ ಮತ್ತು ವಿವಿಧ ಇ.ಎನ್.ಟಿ. ಸಮಸ್ಯೆಗಳ ಬಗ್ಗೆ ವಿವೇಚಿಸಲಾಗಿದೆ. ಈ ಸಂಪರ್ಕವನ್ನು ಗುರುತಿಸುವ ಮತ್ತು ನಿರ್ವಹಿಸುವ ಪ್ರಾಮುಖ್ಯತೆಯ ಮೇಲೆ ಈ ಲೇಖನ ಬೆಳಕು ಚೆಲ್ಲಲಿದೆ.

## ಆಸಿಡ್ ರಿಫ್ಲಕ್ಸ್‌ನ ಮೂಲಭೂತ ಅಂಶಗಳು:

ಹೊಟ್ಟೆಯ ಆಮ್ಲವು ಆಹಾರದ ಪೈಪ್‌ಗೆ ಹಿಂತಿರುಗಿದಾಗ ಕಿರಿಕಿರಿ ಮತ್ತು ಅಸ್ವಸ್ಥತೆಯನ್ನು ಉಂಟುಮಾಡಿದಾಗ ಆಸಿಡ್ ರಿಫ್ಲಕ್ಸ್ ಸಂಭವಿಸುತ್ತದೆ. ಈ ಸ್ಥಿತಿಯಲ್ಲಿ ಎದೆಯುರಿ ಮತ್ತು ಎದೆ ನೋವು ಉಂಟಾಗುತ್ತದೆ. ಅದಾಗ್ಯೂ ಸಹ, ಅದರ ಪ್ರಭಾವವು ಜೀರ್ಣಾಂಗ ವ್ಯವಸ್ಥೆಯನ್ನು ಮೀರಿ ವಿಸ್ತರಿಸುತ್ತದೆ.

## ಲಾರಿಂಗೊ ಫ್ಯಾರಿಂಜಿಯಲ್ ರಿಫ್ಲಕ್ಸ್ (ಎಲ್‌ಪಿಆರ್):


ಆಸಿಡ್ ರಿಫ್ಲಕ್ಸ್‌ನ ಕಡಿಮೆ–ತಿಳಿದಿರುವ ಪರಿಣಾಮವೆಂದರೆ ಲಾರಿಂಗೊ ಫ್ಯಾರಿಂಜಿಯಲ್ ರಿಫ್ಲಕ್ಸ್ ಅಥವಾ ಎಲ್‌ಪಿಆರ್. ಹೊಟ್ಟೆಯ ಆಮ್ಲವು ಗಂಟಲು ಮತ್ತು ಮೂಗಿನ ಮಾರ್ಗವನ್ನು ತಲುಪಿದಾಗ ಇದು ಇಎನ್‌ಟಿ ಸಮಸ್ಯೆಗಳ ಶ್ರೇಣಿಗೆ ಕಾರಣವಾಗುತ್ತದೆ.

## ಗಮನಿಸಬೇಕಾದ ಲಕ್ಷಣಗಳು:

ಎಲ್‌ಪಿಆರ್‌ನ ರೋಗಲಕ್ಷಣಗಳನ್ನು ಗುರುತಿಸುವುದು ಆರಂಭಿಕ ರೋಗ ನಿರ್ಣಯದ ಸಂಗತಿಯಾಗಿರುತ್ತದೆ. ರೋಗಿಗಳು ದೀರ್ಘಕಾಲದ ಕೆಮ್ಮು, ಗಂಟಲು ಕೆರೆತ, ಗಂಟಲು ಕಟ್ಟುವುದು ಮತ್ತು ಗಂಟಲಿನಲ್ಲಿ ಗಡ್ಡೆ ಇರುವಂತಹ ಭಾವನೆಗಳನ್ನು ಅನುಭವಿಸಬಹುದು. ಈ ರೋಗಲಕ್ಷಣಗಳು ಸಾಮಾನ್ಯವಾಗಿ ಇತರ ಇಎನ್‌ಟಿ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ಇದು ಆಸಿಡ್ ರಿಫ್ಲಕ್ಸ್ ಅನ್ನು ಸಂಭಾವ್ಯ ಕಾರಣವೆಂದು ಪರಿಗಣಿಸುವುದು ಅತ್ಯಗತ್ಯ.

## ಗಂಟಲು ಮತ್ತು ವಾಕ್‌ತಂತುಗಳ ಮೇಲೆ ಪರಿಣಾಮ:

ಗಂಟಲನ್ನು ತಲುಪುವ ಆಮ್ಲೀಯ ಅಂಶವು ಉರಿಯೂತ



ಮತ್ತು ಕಿರಿಕಿರಿಯನ್ನು ಉಂಟುಮಾಡಬಹುದು. ದೀರ್ಘಕಾಲದ ಧ್ವನಿಯಲ್ಲಿನ ಬದಲಾವಣೆಗೆ ಕಾರಣವಾಗಬಹುದು. ದೀರ್ಘಕಾಲದ ಗಂಟಲಿನ ಕಿರಿಕಿರಿ, ಮತ್ತು ವಾಕ್ ತಂತುಗಳ ಗಂಟುಗಳು ಅಥವಾ ಪಾಲಿಪ್ಸ್‌ನ ಬೆಳವಣಿಗೆಗೆ ಕಾರಣವಾಗಬಹುದು.

## ಆಸಿಡ್ ರಿಫ್ಲಕ್ಸ್‌ಗೆ ಸಂಬಂಧಿಸಿದ ಕಿವಿ ಸಮಸ್ಯೆಗಳು:


ಆಸಿಡ್ ರಿಫ್ಲಕ್ಸ್ ಕಿವಿಗಳ ಮೇಲೂ ಪರಿಣಾಮ ಬೀರುತ್ತದೆ ಎಂಬುದನ್ನು ನೀವು ನಂಬಲೇಬೇಕು. ಯುಸ್ಟಾಚಿಯನ್ ಟ್ಯೂಬ್ ಅಸಮರ್ಪಕ ಕ್ರಿಯೆ, ಮಧ್ಯದ ಕಿವಿಯನ್ನು ಮೂಗಿನ ಹಿಂಭಾಗಕ್ಕೆ ಸಂಪರ್ಕಿಸುವ ಟ್ಯೂಬ್ ಸರಿಯಾಗಿ ಕಾರ್ಯನಿರ್ವಹಿಸದ ಸ್ಥಿತಿಯು ಆಸಿಡ್ ರಿಫ್ಲಕ್ಸ್‌ನಿಂದ ಉಲ್ಬಣಗೊಳ್ಳುತ್ತದೆ. ಈ ಅಸಮರ್ಪಕ ಕ್ರಿಯೆಯು ಕಿವಿನೋವು, ಒತ್ತಡ ಮತ್ತು ಶ್ರವಣ ನಷ್ಟಕ್ಕೆ ಕಾರಣವಾಗಬಹುದು.

## ಚಿಕಿತ್ಸೆ ಮತ್ತು ತಡೆಗಟ್ಟುವ ಕ್ರಮಗಳು:

**ಆಸಿಡ್ ರಿಫ್ಲಕ್ಸ್ ಅನ್ನು ನಿರ್ವಹಿಸುವುದು ಜೀರ್ಣಕ್ರಿಯೆಯ ಆರೋಗ್ಯಕ್ಕೆ ಮಾತ್ರವಲ್ಲದೆ, ಇಎನ್‌ಟಿ ತೊಡಕುಗಳನ್ನು ತಡೆಗಟ್ಟುವಲ್ಲಿಯೂ ಸಹ ಮುಖ್ಯವಾಗಿದೆ.**

### 1. ಪಥ್ಯದ ಹೊಂದಾಣಿಕೆಗಳು:

- ಸಿಟ್ರಸ್, ಚಾಕೊಲೇಟ್ ಮತ್ತು ಮಸಾಲೆಯುಕ್ತ ಪದಾರ್ಥಗಳಂತಹ ಪ್ರಚೋದಕ ಆಹಾರವನ್ನು ತಪ್ಪಿಸಿ.
- ಆಗಾಗ್ಗೆ ಲಘುವಾದ ಊಟವನ್ನು ತೆಗೆದುಕೊಳ್ಳಿ.






### 2. ಜೀವನಶೈಲಿ ಬದಲಾವಣೆಗಳು:

- ಆಹಾರ ಪದ್ಧತಿ ಮತ್ತು ವ್ಯಾಯಾಮದ ಮೂಲಕ ಆರೋಗ್ಯಕರ ತೂಕವನ್ನು ಕಾಪಾಡಿಕೊಳ್ಳಿ.
- ಮಲಗುವ ಸಮಯಕ್ಕೆ ಊಟ ಮಾಡುವುದನ್ನು ತಪ್ಪಿಸಿ.

### 3. ಸ್ಥಾನಿಕ ಕಾರ್ಯತಂತ್ರಗಳು:

- ಮಲಗುವಾಗ ಹಾಸಿಗೆಯ ತಲೆಯನ್ನು 6–8 ಇಂಚುಗಳಷ್ಟು ಎತ್ತರಿಸಿಕೊಳ್ಳಿ.

### 4. ಜಲಸಂಚಯನ ಪದ್ಧತಿಗಳು:

- ಶರೀರದಲ್ಲಿ ನೀರಿನ ಅಂಶ ಹೆಚ್ಚಿರಬೇಕು. ಅದಕ್ಕೆ ನಿಯಮಿತವಾಗಿ ನೀರು ಕುಡಿಯುತ್ತಿರಿ. ಜೊತೆಗೆ ಉತ್ತಮ ಪಾನೀಯವನ್ನು ಆಯ್ಕೆ ಮಾಡಿಕೊಳ್ಳಿ.

### 5. ಧೂಮಪಾನ ನಿಲ್ಲಿಸುವುದು:

- ಕೆಳಗಿನ ಅನ್ನನಾಳದ ಸ್ಪಿಂಕ್ಟರ್ ಅನ್ನು ಬಲಪಡಿಸಲು ಧೂಮಪಾನವನ್ನು ತ್ಯಜಿಸಿ.

### 6. ಒತ್ತಡ ನಿರ್ವಹಣೆ:

- ಯೋಗ ಮತ್ತು ಧ್ಯಾನದಂತಹ ಅಭ್ಯಾಸಗಳು ಒತ್ತಡವನ್ನು

ಕಡಿಮೆ ಮಾಡುತ್ತವೆ. ಹಾಗಾಗಿ ಈ ಅಭ್ಯಾಸಗಳನ್ನು ನಿಯಮಿತವಾಗಿ ಮುಂದುವರೆಸಿ.

### 7. ಉಡುಪುಗಳ ಆಯ್ಕೆ:

- ಬಿಗಿಯಾದ ಬೆಲ್ಟ್ ಅಥವಾ ಸೊಂಟದ ಪಟ್ಟಿ ಧರಿಸುವುದನ್ನು ತಪ್ಪಿಸಿ.

### 8. ಊಟದ ಸಮಯದಲ್ಲಿ ಮತ್ತು ನಂತರದ ಭಂಗಿ:

- ಊಟದ ನಂತರ ನೇರವಾಗಿ ಮಲಗಿಕೊಳ್ಳಿ. ಊಟವಾದ ತಕ್ಷಣ ಮಲಗುವುದನ್ನು ತಪ್ಪಿಸಿ.

### 9. ಇತರೆ ಆರೋಗ್ಯ ಸ್ಥಿತಿಗಳನ್ನು ಗುರುತಿಸಿ:


- ಹಿಯಾಟಲ್ ಅಂಡವಾಯುಗಳು ಅಥವಾ ಸ್ಥೂಲಕಾಯದಿಂದಾಗುವ ಕೆಟ್ಟ ಪರಿಣಾಮಗಳನ್ನು ತಿಳಿಯುವುದು.

### 10. ವೃತ್ತಿಪರ ಆರೋಗ್ಯ ಸಲಹೆಗಾರರನ್ನು ಸಂಪರ್ಕಿಸಿ:

- ವೈಯಕ್ತಿಕ ಸಲಹೆ ಮತ್ತು ಚಿಕಿತ್ಸೆಗಾಗಿ ನಿಯಮಿತವಾಗಿ ತಪಾಸಣೆ ಮಾಡಿಸಿಕೊಳ್ಳಿ.

### ಉಪಸಂಹಾರ

ಆಸಿಡ್ ರಿಫ್ಲಕ್ಸ್ ಮತ್ತು ಇಎನ್‌ಟಿ ಸಮಸ್ಯೆಗಳ ನಡುವಿನ ಸಂಬಂಧವನ್ನು ಅರ್ಥಮಾಡಿಕೊಳ್ಳುವುದರಿಂದ ವ್ಯಕ್ತಿಗಳು ತಮ್ಮ ಆರೋಗ್ಯವನ್ನು ನಿರ್ವಹಿಸುವಲ್ಲಿ ಪೂರ್ವಭಾವಿ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲು ಸಹಾಯವಾಗುತ್ತದೆ. ರೋಗ ಲಕ್ಷಣಗಳನ್ನು ಗುರುತಿಸುವ ಮೂಲಕ ಮತ್ತು ಸಮಯೋಚಿತ ಸಲಹೆ ಪಡೆಯುವ ಮೂಲಕ, ನಿಮ್ಮ ಕಿವಿ, ಮೂಗು ಮತ್ತು ಗಂಟಲಿನ ಮೇಲೆ ಆಸಿಡ್ ರಿಫ್ಲಕ್ಸ್‌ನ ಪರಿಣಾಮವನ್ನು ನೀವು ತಗ್ಗಿಸಬಹುದು. ಮಾತ್ರವಲ್ಲ, ಉತ್ತಮ ಗುಣಮಟ್ಟದ ಜೀವನವನ್ನು ಖಚಿತಪಡಿಸಿಕೊಳ್ಳಬಹುದು. ಸಂದೇಹಗಳು ಎದುರಾದಲ್ಲಿ, ವೈಯಕ್ತಿಕ ಸಲಹೆ ಮತ್ತು ಮಾರ್ಗದರ್ಶನಕ್ಕಾಗಿ ಇಎನ್‌ಟಿ ತಜ್ಞರನ್ನು ಸಂಪರ್ಕಿಸಲು ಮರೆಯಬಾರದು.





■ ಕನ್ನಡಕ್ಕೆ: ಬಿ.ಎಂ. ಸುನೀತಾ

*A book titled*

## *The Galaxy*

The Brains Hospital, Bengaluru, has published the book titled ***"The Galaxy"*** an English version of the work **"Mahamahimaru"** brought out by Kamadhenu Pustaka Bhavana. Renowned neurosurgeon Dr. N.K. Venkataramana has authored this book.





**"The Galaxy"** gives a glimpse into the life of 37 great personalities. Yogis, ancient rishis, social reformers, scientists of international fame, successful entrepreneurs are included in this list. Dr. N.K. Venkataramana introduces the reader to various hitherto unknown facets of these personalities. The book blends neuroscience and pure spirituality.

The Kannada version is priced at Rs. 375 and The 336-page "The Galaxy" is available for Rs. 340.

ಡಾ. ಎನ್.ಕೆ. ವೆಂಕಟರಮಣ ಅವರ

## ಮಹಾಮಹಿಮರು

ಖ್ಯಾತ ನ್ಯೂರೋಸರ್ಜನ್ ಡಾ. ಎನ್.ಕೆ.ವೆಂಕಟರಮಣ ಅವರ 'ಮಹಾಮಹಿಮರು' ಗ್ರಂಥವನ್ನು 'ಕಾಮಧೇನು ಪುಸ್ತಕ ಭವನ' 5/1, ನಾಗಪ್ಪ ಬೀದಿ, ಶೇಷಾದ್ರಿಪುರಂ, ಬೆಂಗಳೂರು 20 ಇವರು ಪ್ರಕಟಿಸಿದ್ದಾರೆ. ಇದರ ಇಂಗ್ಲಿಷ್ ಆವೃತ್ತಿ ***The Galaxy*** ಗ್ರಂಥವನ್ನು ಬೆಂಗಳೂರಿನ ಬ್ರೈನ್ಸ್ ಆಸ್ಪತ್ರೆ ಪ್ರಕಟಿಸಿರುತ್ತಾರೆ. ಈ ಎರಡು ಆವೃತ್ತಿಗಳ ಬೆಲೆ ಹೀಗಿದೆ. ಕನ್ನಡ ಆವೃತ್ತಿ 375 ರೂ. ಮತ್ತು ಇಂಗ್ಲಿಷ್ ಆವೃತ್ತಿಯ ಬೆಲೆ 340.ರೂ ಇವುಗಳು ಒಟ್ಟು 336 ಪುಟಗಳಿವೆ.




ಮಹಾಮಹಿಮರು ಗ್ರಂಥದಲ್ಲಿ ಮೂವತ್ತೇಳು ಮಹಾನ್ ಪುರುಷರ ಆತ್ಮೀಯ ಪರಿಚಯವಿದೆ. ಈ ಮಾಲೆಯಲ್ಲಿ ಯೋಗಿಗಳಿದ್ದಾರೆ, ಪ್ರಾಚೀನ ಋಷಿಗಳಿದ್ದಾರೆ, ಸಮಾಜಸುಧಾರಕರಿದ್ದಾರೆ. ಅಂತಾರಾಷ್ಟ್ರೀಯ ಖ್ಯಾತಿ ಪಡೆದಿರುವ ವಿಜ್ಞಾನಿಗಳಿದ್ದಾರೆ. ಯಶಸ್ವಿ ಉದ್ಯಮಪತಿಗಳಿದ್ದಾರೆ. ಇಂತಹ ಅಪರೂಪದ ವ್ಯಕ್ತಿಗಳನ್ನು ಒಂದೆಡೆ ಕಲೆ ಹಾಕಿರುವುದು ಡಾ. ಎನ್.ಕೆ.ವೆಂಕಟರಮಣ ಅವರ ವೈಶಿಷ್ಟ್ಯ. ನ್ಯೂರೋ ವಿಜ್ಞಾನ ಮತ್ತು ಶುದ್ಧ ಅಧ್ಯಾತ್ಮದ ಅಪೂರ್ವ ಸಂಗಮವನ್ನು ಈ ಗ್ರಂಥದಲ್ಲಿ ಕಾಣಬಹುದು.

ಸನ್ನಿಧಿ

ಡಾ. ಎನ್. ಕೆ. ವೆಂಕಟರಮಣ

# ಅಧ್ಯಾತ್ಮ ಮತ್ತು ಜ್ಞಾನದ ಸಂಗಮ
# ಶ್ರೀ ಜಯೇಂದ್ರಪುರಿ ಮಹಾಸ್ವಾಮಿಗಳು

ಪರಮಪೂಜ್ಯ ಶ್ರೀಜಯೇಂದ್ರಪುರಿ ಸ್ವಾಮೀಜಿ ಅವರು ಆಧ್ಯಾತ್ಮಿಕ ಗುರುಗಳು, ಪೂಜ್ಯ ಶ್ರೀಶಿವಪುರಿ ಬಾಬಾ ಮತ್ತು ಪೂಜ್ಯಶ್ರೀ ತಿರುಚ್ಚಿ ಮಹಾಸ್ವಾಮಿಗಳವರ ಶಿಷ್ಯರು.

ಬೆಂಗಳೂರಿನಲ್ಲಿ 1960ರಲ್ಲಿ ಶ್ರೀ ತಿರುಚ್ಚಿ ಮಹಾಸ್ವಾಮಿಗಳು ಸ್ಥಾಪಿಸಿದ ಕೈಲಾಶ್ ಆಶ್ರಮ ಮಹಾಸಂಸ್ಥಾನಕ್ಕೆ ಪ್ರಸ್ತುತ ಶ್ರೀಜಯೇಂದ್ರಪುರಿ ಸ್ವಾಮೀಜಿಯವರು ಅಧ್ಯಕ್ಷರಾಗಿದ್ದಾರೆ. ಜೊತೆಗೆ ಜ್ಞಾನಾಕ್ಷಿ ಶಿಕ್ಷಣ ಸಂಸ್ಥೆಗಳ ಟ್ರಸ್ಟ್ ಮತ್ತು ಶ್ರೀರಾಜರಾಜೇಶ್ವರಿ ಚಾರಿಟಬಲ್ ಟ್ರಸ್ಟ್ ಸೇರಿದಂತೆ ಅನೇಕ ಟ್ರಸ್ಟ್‌ಗಳಿಗೂ ಅವರೇ ಪೀಠಾಧಿಪತಿಗಳಾಗಿದ್ದಾರೆ.


1960ರ ಅಕ್ಟೋಬರ್ 20ರಂದು ಜನಿಸಿದ ಶ್ರೀಜಯೇಂದ್ರಪುರಿ ಮಹಾಸ್ವಾಮೀಜಿ ಮಾನವೀಯತೆಗೆ ಒಂದು ಮಂಗಳಕರ ಅನುಗ್ರಹವಾಗಿದ್ದಾರೆ. ಬಾಲ್ಯ ಜೀವನವನ್ನು ಸಾರ್ಥಕವಾಗಿ ಕಳೆದ ಸ್ವಾಮೀಜಿಯವರು ತಮ್ಮ ಜೀವನದ ಎಲ್ಲಾ ವಿಷಯಗಳಲ್ಲೂ ಯಶಸ್ಸನ್ನು ಕಂಡಿರುವರು.

ಸ್ವಲ್ಪ ಆಧುನಿಕ ಕುಟುಂಬದಿಂದ ಬಂದ ಸ್ವಾಮೀಜಿಯವರು ಹಿಂದೂ ಧರ್ಮಗ್ರಂಥಗಳಿಗೆ ಮೊದಲ ಮಾನ್ಯತೆ ನೀಡಿದ್ದರು. ಅವರಿಗೆ 27ವರ್ಷ ವಯಸ್ಸಾದಾಗ. ವಿಸ್ಮಯಕರ ಸಂಗತಿ ಜರುಗಿತು. ಸ್ವಾಮೀಜಿ ಈ ಧರ್ಮಗ್ರಂಥಗಳನ್ನು ಮೊದಲ ಬಾರಿಗೆ ಓದಿದಾಗ, ಅದರ ಪರಿಚಯ ತಮಗೆ ಮೊದಲೇ ತಿಳಿದಿದೆ ಹಾಗೂ ಬಹಳ ಪರಿಚಿತವಾಗಿದೆ ಎನಿಸಿತು.

ಸ್ವಾಮೀಜಿಯವರಿಗೆ 1987ರಲ್ಲಿ ಶ್ರೀಕೈಲಾಶ್ ಆಶ್ರಮ ಮಹಾ ಸಂಸ್ಥಾನದಲ್ಲಿ ತಮ್ಮ ಮಾರ್ಗವನ್ನು ಕಂಡುಕೊಳ್ಳಲು, ಪೂಜ್ಯಶ್ರೀ ತಿರುಚ್ಚಿ ಮಹಾಸ್ವಾಮೀಜಿ ಅವರಿಂದ ದೈವಿಕ ಮಾರ್ಗದರ್ಶನ ಪಡೆಯಲು ಪ್ರೇರಣೆಯಾಯಿತು. ಸ್ವಾಮೀಜಿ ಶ್ರೀತಿರುಚ್ಚಿ ಮಹಾಸ್ವಾಮಿಗಳ ಸನ್ನಿಧಿಯಲ್ಲಿ ಗುರುಗಳನ್ನು ಕಂಡುಕೊಂಡ ಅನುಭವವಾಯಿತು.

ಜಗನ್ಮಾತೆಯ ಸೌಂದರ್ಯ ಮತ್ತು ದೈವಿಕತೆಯನ್ನು ಕಾಣುವುದು ತಮ್ಮ ಗುರಿಯಾಗಿದೆ ಎಂದು ಶ್ರೀಜಯೇಂದ್ರಪುರಿ ಮಹಾಸ್ವಾಮೀಜಿಯವರು ಗುರುಗಳಿಗೆ ತಮ್ಮ ಬಯಕೆಯನ್ನು ವಿನಮ್ರವಾಗಿ ವ್ಯಕ್ತಪಡಿಸಿದರು. ಇದಕ್ಕಾಗಿ, ಸನ್ಯಾಸ ಸ್ವೀಕರಿಸುವ ಬಯಕೆಯನ್ನೂ ವ್ಯಕ್ತಪಡಿಸಿದರು. ತಿರುಚ್ಚಿ ಸ್ವಾಮಿಗಳು ತಮ್ಮ ಆಶ್ರಮದಲ್ಲಿದ್ದುಕೊಂಡು ಕಾಯುವಂತೆ ಹೇಳಿದರು.

*ಶ್ರೀಜಯೇಂದ್ರಪುರಿ ಸ್ವಾಮಿಗಳನ್ನು ತಮ್ಮ ಉತ್ತರಾಧಿಕಾರಿಯಾಗಿ ಏಕೆ ಆರಿಸಿದ್ದೀರಿ ಎಂದು ಪೂಜ್ಯ ಶ್ರೀತಿರುಚ್ಚಿ ಮಹಾಸ್ವಾಮೀಜಿ ಅವರನ್ನು ಪ್ರಶ್ನಿಸಿದಾಗ, "ಶ್ರೀಜಯೇಂದ್ರಪುರಿ ಸ್ವಾಮಿಗಳು ಉತ್ತಮ ವಿದ್ಯಾವಂತರು, ಪ್ರಾಮಾಣಿಕರು ಹಾಗೂ ಸಾಧನೆಗಾಗಿ ತಮ್ಮನ್ನು ಸಮರ್ಪಿಸಿಕೊಂಡಿರುವವರು. ಅವರು ಶಾಸ್ತ್ರಗಳ ಸಂಪೂರ್ಣ ಜ್ಞಾನ ಹೊಂದಿದ್ದಾರೆ. ಆಶ್ರಮದ ಸಂಪ್ರದಾಯವನ್ನು ಸಂಪೂರ್ಣ ಶ್ರದ್ಧೆಯಿಂದ ನಡೆಸುತ್ತಾರೆ. ಕರುಣಾಮಯಿಯಾಗಿರುವ ಅವರು, ಬಡವರ ಬಗ್ಗೆ ಕಾಳಜಿ ಹೊಂದಿದ್ದು, ಎಲ್ಲರ ಕಲ್ಯಾಣಕ್ಕಾಗಿ ಕೆಲಸ ಮಾಡುತ್ತಾರೆ. ಅವರ ಶಾಂತ ಹಾಗೂ ತಾಳ್ಮೆಯ ಸ್ವಭಾವದ ಮೂಲಕ ನಮ್ಮ ಅಧ್ಯಾತ್ಮ ಮಾರ್ಗವನ್ನು ಅರ್ಥಮಾಡಿಕೊಳ್ಳುತ್ತಾರೆ" ಎಂದು ಹೇಳಿದರು.*



ಒಂದು ತಿಂಗಳ ನಂತರ ಅವರನ್ನು ಸಂಸ್ಕೃತ ಮತ್ತು ಧರ್ಮಗ್ರಂಥಗಳನ್ನು ಕಲಿಯಲು ಹರಿದ್ವಾರಕ್ಕೆ ಕಳುಹಿಸಲಾಯಿತು. ಅಲ್ಲಿ ಹೆಚ್. ಹೆಚ್. ಆಚಾರ್ಯ ಮಹಾಮಂಡಲೇಶ್ವರ ಸ್ವಾಮಿ ಪ್ರಕಾಶಾನಂದಜಿ ಮಹಾರಾಜ್ ಅವರ ಸೇವೆ ಮಾಡಲು ಸೂಚಿಸಲಾಯಿತು. ಅಲ್ಲಿಗೆ ಹೊರಡುವ ಮೊದಲು, ದೊಡ್ಡ ಶ್ರೀಗಳಿಂದ ಬ್ರಹ್ಮಚರ್ಯದ ವಸ್ತ್ರವನ್ನು ಪಡೆದರು. ನಂತರ ಏಳೂವರೆ ವರ್ಷಗಳ ಕಾಲ ಶ್ರೀಜಯೇಂದ್ರಪುರಿ ಸ್ವಾಮೀಜಿಯವರು ಹರಿದ್ವಾರ ಮತ್ತು ಉತ್ತರ ಭಾರತದಲ್ಲಿ ನೆಲೆಸಿದರು.

1989ರ ಆರಂಭದಲ್ಲಿ ಅಲಹಾಬಾದ್ ಕುಂಭಮೇಳದ ಮೊದಲು, ಅವರು ಸನ್ಯಾಸ ದೀಕ್ಷೆಯನ್ನು ನೀಡುವಂತೆ ಕೋರಿ ಮತ್ತೊಮ್ಮೆ ಮಹಾಸ್ವಾಮೀಜಿ ಅವರಿಗೆ ಪತ್ರ ಬರೆದರು. ಅಂತಿಮವಾಗಿ ಹರಿದ್ವಾರದಲ್ಲಿ ಶ್ರೀತಿರುಚ್ಚಿ ಮಹಾಸ್ವಾಮಿಗಳನ್ನು ತಮ್ಮ ಗುರುಗಳಾಗಿ ಸ್ವೀಕರಿಸುವುದರೊಂದಿಗೆ ಸಂನ್ಯಾಸ ಸ್ವೀಕರಿಸಲು ಅನುಮತಿ ದೊರೆಯಿತು.

ಶ್ರೀಜಯೇಂದ್ರಪುರಿ ಸ್ವಾಮೀಜಿಯವರು ಹರಿದ್ವಾರದಲ್ಲಿ ಬಹಳ ಶಿಸ್ತು ಹಾಗೂ ಸಂಯಮದಿಂದ ನಡೆದುಕೊಂಡರು. ತಮ್ಮ ಕರ್ತವ್ಯ ಮತ್ತು ಅಧ್ಯಯನ ಪೂರ್ಣಗೊಳಿಸಿದ ನಂತರ, ಶ್ರೀಕೈಲಾಶ್ ಆಶ್ರಮ ಮಹಾಸಂಸ್ಥಾನ, ಶ್ರೀರಾಜರಾಜೇಶ್ವರಿ ಮಾತಾ ಮತ್ತು ಗುರುಗಳಾದ ಶ್ರೀತಿರುಚ್ಚಿ ಮಹಾಸ್ವಾಮಿಗಳ ಸೇವೆ ಮಾಡಲು ಹಿಂದಿರುಗಿದರು.

2003ರ ಡಿಸೆಂಬರ್ 11ರಂದು ಶ್ರೀಜಯೇಂದ್ರಪುರಿ ಅವರನ್ನು ಪೂಜ್ಯ ಶ್ರೀ ತಿರುಚ್ಚಿ ಮಹಾಸ್ವಾಮಿಗಳು ಕೈಲಾಶ್ ಆಶ್ರಮ ಮಹಾಸಂಸ್ಥಾನದ ಪೀಠಾಧಿಪತಿಯಾಗಿ ನೇಮಿಸಿದರು. ಶ್ರೀಜಯೇಂದ್ರಪುರಿ ಸ್ವಾಮಿಗಳನ್ನು ತಮ್ಮ ಉತ್ತರಾಧಿಕಾರಿಯಾಗಿ ಏಕೆ ಆರಿಸಿದ್ದೀರಿ ಎಂದು ಪೂಜ್ಯ ಶ್ರೀತಿರುಚ್ಚಿ ಮಹಾಸ್ವಾಮೀಜಿ ಅವರನ್ನು ಪ್ರಶ್ನಿಸಿದಾಗ, "ಶ್ರೀಜಯೇಂದ್ರಪುರಿ ಸ್ವಾಮಿಗಳು ಉತ್ತಮ ವಿದ್ಯಾವಂತರು, ಪ್ರಾಮಾಣಿಕರು ಹಾಗೂ ಸಾಧನೆಗಾಗಿ ತಮ್ಮನ್ನು ಸಮರ್ಪಿಸಿಕೊಂಡಿರುವವರು. ಅವರು ಶಾಸ್ತ್ರಗಳ ಸಂಪೂರ್ಣ ಜ್ಞಾನ ಹೊಂದಿದ್ದಾರೆ. ಆಶ್ರಮದ ಸಂಪ್ರದಾಯವನ್ನು ಸಂಪೂರ್ಣ ಶ್ರದ್ಧೆಯಿಂದ ನಡೆಸುತ್ತಾರೆ. ಕರುಣಾಮಯಿಯಾಗಿರುವ ಅವರು, ಬಡವರ ಬಗ್ಗೆ ಕಾಳಜಿ ಹೊಂದಿದ್ದು, ಎಲ್ಲರ ಕಲ್ಯಾಣಕ್ಕಾಗಿ ಕೆಲಸ ಮಾಡುತ್ತಾರೆ. ಅವರ ಶಾಂತ ಹಾಗೂ ತಾಳ್ಮೆಯ ಸ್ವಭಾವದ ಮೂಲಕ ನಮ್ಮ ಅಧ್ಯಾತ್ಮ ಮಾರ್ಗವನ್ನು ಅರ್ಥಮಾಡಿಕೊಳ್ಳುತ್ತಾರೆ" ಎಂದು ಹೇಳಿದರು.


ಶ್ರೀಜಯೇಂದ್ರ ಪುರಿ ಸ್ವಾಮೀಜಿಯವರು ಅನೇಕ ವಿಶೇಷ ಪ್ರತಿಭೆಗಳನ್ನು ಹೊಂದಿದ್ದಾರೆ ಅದರಲ್ಲಿ ಭಾಷಾಕಲಿಕೆಯ ಸಾಮರ್ಥ್ಯವಿದೆ. ದಕ್ಷಿಣ ಭಾರತದ ಎಲ್ಲಾ ಉಪಭಾಷೆಗಳೂ ಅವರಿಗೆ ತಿಳಿದಿವೆ. ಜೊತೆಗೆ ಹಿಂದಿ, ಸಂಸ್ಕೃತ, ಇಂಗ್ಲಿಷ್, ಜರ್ಮನ್ ಮತ್ತು ಇಟಾಲಿಯನ್ ಭಾಷೆಗಳನ್ನು ನಿರರ್ಗಳವಾಗಿ ಮಾತನಾಡುತ್ತಾರೆ.

### ಸ್ವಾಮೀಜಿಯವರ ಧ್ಯೇಯ ಮತ್ತು ಕಾರ್ಯಗಳು:

ಮಾನವನ ಜೀವನ ಎದುರಿಸುತ್ತಿರುವ ಎಲ್ಲಾ ತೊಂದರೆಗಳಿಗೆ ಭಾರತೀಯ ಸಂಸ್ಕೃತಿಯು ರಾಮಬಾಣವಾಗಿದೆ ಎಂಬುದು ಸ್ವಾಮೀಜಿ ಅವರ ದೃಢ ನಂಬಿಕೆಯಾಗಿದೆ. ತತ್ಪರಿಣಾಮವಾಗಿ, ಸ್ವಾಮೀಜಿಯವರ ಏಕೈಕ ಗುರಿ ಎಂದರೆ, ಭಾರತೀಯ ಸಂಸ್ಕೃತಿಯ ವೈಭವಯುತ ಪರಂಪರೆಯನ್ನು ಅದರ ಸಂಪೂರ್ಣತೆಯೊಂದಿಗೆ, ವಿಶ್ವ ಎಲ್ಲಾ ಸಂಸ್ಕೃತಿಗಳಿಗೆ ಅನುಗುಣವಾಗಿ ಪುನರುಜ್ಜೀವನ ಗೊಳಿಸುವುದು.

### ಶಿಕ್ಷಣ ಮತ್ತು ನೈತಿಕತೆ:

"ಭವ್ಯ ಭಾರತದ ಭವಿಷ್ಯವನ್ನು ನಿರ್ಮಿಸಲು ಸಂಸ್ಕೃತಿ ಮತ್ತು ಪರಂಪರೆಯನ್ನು ಮರುಸ್ಥಾಪಿಸಲಿರುವ ಯಶಸ್ವಿ ಮಾರ್ಗವೆಂದರೆ, ಧರ್ಮಗ್ರಂಥಗಳಲ್ಲಿ ಸೂಚಿಸಿರುವ ಧಾರ್ಮಿಕ ಮೌಲ್ಯಗಳನ್ನು ಅಳವಡಿಸುವ ನೀತಿಯನ್ನು ಅಭಿವೃದ್ಧಿಪಡಿಸುವುದು. ಅಗತ್ಯವಿರುವ ಎಲ್ಲಾ ಮೂಲಸೌಕರ್ಯಗಳೊಂದಿಗೆ ಗುಣಮಟ್ಟದ ಆಧುನಿಕ



ಶಿಕ್ಷಣವನ್ನು ಏಕಕಾಲದಲ್ಲಿ ಒದಗಿಸುವುದು" ಎಂದು ಪರಮಪೂಜ್ಯರು ನಂಬುತ್ತಾರೆ.

ಟ್ರಸ್ಟ್ ಒಂಬತ್ತು ಶಿಕ್ಷಣ ಸಂಸ್ಥೆಗಳನ್ನು ಹೊಂದಿದೆ. ಎಲ್ಲರಿಗೂ ಶಿಕ್ಷಣವನ್ನು ಖಾತ್ರಿಪಡಿಸುವ ನಿಟ್ಟಿನಲ್ಲಿ ಬದ್ಧವಾಗಿದೆ. ಪ್ರತಿಯೊಂದು ಸಂಸ್ಥೆಗಳಲ್ಲಿ ರಚಿಸಲಾದ ಉತ್ತಮ ವಾತಾವರಣವು ಮಕ್ಕಳ ನೈಸರ್ಗಿಕ ಚೈತನ್ಯವನ್ನು ಹೊರತರುತ್ತದೆ. ಶೈಕ್ಷಣಿಕವಾಗಿ ಮಾತ್ರವಲ್ಲ, ಲಲಿತಕಲೆಗಳು, ಕ್ರೀಡೆಗಳು ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಅವರ ನಿಜವಾದ ಸಾಮರ್ಥ್ಯವನ್ನು ಅನ್ವೇಷಿಸಲು ಅವರಿಗೆ ಅನುವು ಮಾಡಿಕೊಡುತ್ತದೆ.

ಮಹಾಸಂಸ್ಥಾನವು 1974ರಿಂದ ಶ್ರೀರಾಜರಾಜೇಶ್ವರಿ ಸಂಸ್ಕೃತ ವೇದಾಗಮ ಮಹಾಪಾಠಶಾಲೆಯನ್ನು ನಡೆಸುತ್ತಿದೆ. ಇದು ವೇದಗಳು, ಆಗಮಗಳು ಮತ್ತು ಶಾಸ್ತ್ರಗಳ ಎಲ್ಲಾ ಆಚಾರ ಮತ್ತು ನಿಯಮಗಳಲ್ಲಿ ಚೆನ್ನಾಗಿ ಪಾರಂಗತರಾಗಿ ಸನ್ಯಾಸಿಗಳಾಗಲು ಬಯಸುವವರಿಗೆ ತರಬೇತಿ ನೀಡುವ ಕಾರ್ಯ ಮಾಡುತ್ತಿದೆ. ಪಾಠಶಾಲೆಯು ಅತ್ಯಂತ ಉದ್ಯಮಶೀಲ ಮತ್ತು ಉಲ್ಲಾಸದಾಯಕ ವಾತಾವರಣ ಹೊಂದಿದೆ. ಶೈವ ಮತ್ತು ವೈಷ್ಣವ ಬ್ರಹ್ಮಚಾರಿಗಳು ಸಹಬಾಳ್ವೆಯ ಮೂಲಕ ಇಲ್ಲಿ ಕಲಿಯುತ್ತಿದ್ದಾರೆ.

### ಭವ್ಯ ಭಾರತ ಭವಿಷ್ಯಂ:

ದುಡಿಯುವ ಪೋಷಕರಿಗೆ ಸಾಂಪ್ರದಾಯಿಕ ಅವಿಭಕ್ತ ಕುಟುಂಬ ವ್ಯವಸ್ಥೆಯ ವಿಘಟನೆಯಾದ ನಂತರ ಅನೇಕ ಸಾಂಸ್ಕೃತಿಕ ಅಂಶಗಳ ತಿಳುವಳಿಕೆ ಅಪೂರ್ಣವಾಗಿದೆ. 'ಭವ್ಯ ಭಾರತ ಭವಿಷ್ಯಂ' ಎನ್ನುವ ನಿಯತಕಾಲಿಕವು ಈ ದಿಶೆಯಲ್ಲಿ ಅನೇಕ ಕುಟುಂಬಗಳಿಗೆ ಮಾರ್ಗ ದರ್ಶನಕ್ಕೆ ಮಾಡುತ್ತಿದೆ. ಭಗವದ್ಗೀತೆ, ಶ್ರೀದೇವಿ ಭಾಗವತಂ, ಶ್ರೀಮದ್ಭಾಗವತಂ, ಶ್ರೀರಾಮಚರಿತ ಮಾನಸ, ಮೊದಲಾದ ಆತ್ಮಬೋಧನೆಯ ಪವಿತ್ರಗ್ರಂಥಗಳ ಮೇಲೆ ನಿಯಮಿತ ಪ್ರವಚನ ಗಳನ್ನು ಪೂಜ್ಯರು ನೀಡುತ್ತಾರೆ.

### ಸತ್ಸಂಗ:

ವಿಶ್ವದಾದ್ಯಂತ ಹರಡಿರುವ ಭಕ್ತರನ್ನು ತಲುಪುವ ಪ್ರಯತ್ನದಲ್ಲಿ ಸ್ವಾಮೀಜಿಯವರು ಸಂಬಂಧಿಸಿದ ನಿರ್ದಿಷ್ಟ ವಿಷಯಗಳ ಮೇಲೆ ಪ್ರತಿದಿನ ಸತ್ಸಂಗವನ್ನು ನಡೆಸುತ್ತಾರೆ. ಒಬ್ಬರ ಜೀವನದ ನಡವಳಿಕೆಯಿಂದ ಹಿಡಿದು ಆಚರಣೆ ಮತ್ತು ಭಕ್ತರ ಪ್ರಶ್ನೆಗಳಿಗೆ ಪರಿಹಾರ ನೀಡುತ್ತಾರೆ. ಈ ಸತ್ಸಂಗಗಳನ್ನು ವೀಡಿಯೋ ರೆಕಾರ್ಡ್ ಮಾಡಲಾಗುತ್ತದೆ ಹಾಗೂ ಮಹಾಸಂಸ್ಥಾನದ ಯೂಟ್ಯೂಬ್ ಚಾನೆಲ್‌ಗೆ ನಿಯಮಿತವಾಗಿ ಅಪ್‌ಲೋಡ್ ಮಾಡಲಾಗುತ್ತದೆ.



### ತ್ಯಾಜ್ಯ ನಿರ್ವಹಣೆ:

ತ್ಯಾಜ್ಯ ನಿರ್ವಹಣೆ ಮತ್ತು ಜೈವಿಕ ತ್ಯಾಜ್ಯದ ಪರಿವರ್ತನೆ, ಮುಖ್ಯವಾಗಿ ಆಹಾರ ಮತ್ತು ಅಡುಗೆ ತ್ಯಾಜ್ಯವನ್ನು ಕೇಂದ್ರೀಕರಿಸುವ ಕ್ಷೇತ್ರವೆಂದು ಗುರುತಿಸಲಾಗಿದೆ. ಪರಿಸರ ಸಂರಕ್ಷಣೆಯ ಕಡೆಗೆ ತಮ್ಮ ಕೈಲಾದಷ್ಟು ಪಯತ್ನ ಮಾಡುವಲ್ಲಿ ಮಹಾಸಂಸ್ಥಾನದ ಎಲ್ಲಾ ಭಕ್ತರನ್ನು ಪೂಜ್ಯ ಸ್ವಾಮೀಜಿ ಅವರು ಪ್ರೋತ್ಸಾಹಿಸುತ್ತಾ ಬಂದಿದ್ದಾರೆ.

### ಯೋಗಕ್ಷೇಮದ ತ್ರಿ-ಪಿರಮಿಡ್:

ಕಾಂಕ್ರೀಟ್ ಕಟ್ಟಡಗಳ ನಿರ್ಮಾಣಗಳ ಕಡಿಮೆಗೊಳಿಸುವ ಪರಿಕಲ್ಪನೆ ಪೂಜ್ಯರಲ್ಲಿ ಬಹಳ ಸ್ಪಷ್ಟವಾಗಿದೆ. ಅವರು ಯಾವಾಗಲೂ ಸಮರ್ಥನೀಯ ನಿರ್ಮಾಣಗಳ ರೂಪದಲ್ಲಿ ಪರ್ಯಾಯಗಳನ್ನು ಪ್ರಸ್ತುತಪಡಿಸುತ್ತಾರೆ. ಪರ್ಯಾಯ ಮೂಲಸೌಕರ್ಯ ಕ್ಷೇತ್ರದಲ್ಲಿನ ಚರ್ಚೆಗಳನ್ನು ಅವರು ನಿರಂತರವಾಗಿ ಪ್ರೋತ್ಸಾಹಿಸುತ್ತಾರೆ. ಅಲ್ಲದೆ ಪ್ರಾಯೋಗಿಕ ಅನುಷ್ಠಾನಕ್ಕಾಗಿ ಪ್ರೋತ್ಸಾಹವನ್ನೂ ನೀಡುತ್ತಾರೆ. ಶ್ರೀಶಿವರತ್ನಪುರಿ ದೇವಾಲಯ, ಯೋಗಕ್ಷೇಮದ ತ್ರಿ-ಪಿರಮಿಡ್ ಪೂಜ್ಯರ ವಾಸಸ್ಥಾನವಾಗಿದೆ. ಪಿರಮಿಡ್ ರೂಪದಲ್ಲಿರುವ ಇದು ವಿಶ್ವದ ಮೊದಲ ಆಸ್ಪತ್ರೆಯಾಗಿದೆ. ಒಂದೇ ಸೂರಿನಡಿ ಹಲವಾರು ಔಷಧ ಮತ್ತು ಚಿಕಿತ್ಸೆಗಳನ್ನು ನೀಡಲಾಗುತ್ತದೆ.

ಭಕ್ತಿ (ಸಮರ್ಪಣೆ) ಮತ್ತು ಮುಕ್ತಿ (ವಿಮೋಚನೆ) ಮೂಲಕ ಎಲ್ಲರಿಗೂ ಆನಂದವನ್ನು ಕರುಣಿಸುವ ಉದ್ದೇಶ ಹೊಂದಿರುವ, ಸನಾತನ ಧರ್ಮದ ತತ್ವಗಳನ್ನು ಬೋಧಿಸುತ್ತಾ ಬಂದಿರುವ ಧೀಮಂತ ವ್ಯಕ್ತಿತ್ವದ ಪರಮಪೂಜ್ಯ ಶ್ರೀ ಜಯೇಂದ್ರಪುರಿ ಮಹಾಸ್ವಾಮೀಜಿ ಅವರ ಮಾರ್ಗದರ್ಶನ ಪಡೆಯುತ್ತಿರುವ ಶ್ರೀ ಕೈಲಾಶ್ ಆಶ್ರಮ ಮಹಾಸಂಸ್ಥಾನದ ಭಕ್ತರು ನಿಜವಾಗಿಯೂ ಧನ್ಯರು.

■ ಕನ್ನಡಕ್ಕೆ: ಬಿ.ಎಂ. ಸುನೀತಾ


## ಬ್ರೈನ್ಸ್ ವಾಯ್ಸ್ ಪತ್ರಿಕೆ ಚಂದಾದಾರರಾಗಿ

**Comprehensive Trauma Consortium** ಸಂಸ್ಥೆಯ (ಕಾಂಪ್ರೆಹೆನ್ಸಿವ್ ಟ್ರೋಮಾ ಕನ್‌ಸೋರ್ಟಿಯಂ) ವತಿಯಿಂದ ಕಳೆದ ಮೂರು ವರ್ಷಗಳಿಂದ ಬ್ರೈನ್ಸ್ ವಾಯ್ಸ್ ಪತ್ರಿಕೆಯನ್ನು ಪ್ರಕಟಿಸಲಾಗುತ್ತಿದೆ. ಪತ್ರಿಕೆಯ ಪ್ರಕಟಣೆಯಲ್ಲಿ ಲಾಭ ಮಾಡುವ ಉದ್ದೇಶವಿಲ್ಲ. ಅಪಘಾತದಲ್ಲಿ ನೊಂದವರ ತಕ್ಷಣದ ಚಿಕಿತ್ಸೆಗೆ ಜನ್ಮತಾಳಿರುವ ಸಂಘಟನೆಯಿದು. ಇದಕ್ಕೆ ಬರುವ ಮೊತ್ತವನ್ನು ಆ ಉದ್ದೇಶಕ್ಕಾಗಿ ಬಳಸಲಾಗುತ್ತಿದೆ. ಈ ಕೆಳಗಿನ ಖಾತೆಗೆ Cheque/NEFT/RTGSಗಳ ಮೂಲಕ ಪಾವತಿಸಿ.

**ಚಂದಾದಾರರಾಗುವ ಮೂಲಕ ಜೀವ ಉಳಿಸಿ**

**ವಾರ್ಷಿಕ ಚಂದಾ: ರೂ.400/-**
(ಅಂಚೆ ವೆಚ್ಚ ಸೇರಿ)

Postal Address: **BRAINS**
**N0. 560, 9th 'A' Main, Near Indiranagar Metro Station, Bangalore - 560038.**

Scan & Pay

Account Name: **Comprehensive Trauma Consortium**
Bank: **Axis Bank**
Account No. **919010047372470**
IFSC Code: **UTIB0002969**
Branch : **Double Road, Indiranagar, Bangalore**

Brain Voice News letter, Kannda & English, Monthly. RNI.No.KARBIL/2018/78464,
Regd.No.G2/KRNA/BGE-1168/2022-2024. Date Of Publication 29th of every month and posted on the 30th of every month at Bengaluru PSO, Mysore Road, Bengaluru, 560 026. Pages 20



# Our Expertise in BRAINS Super Speciality Hospital

# ಬ್ರೈನ್ಸ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿರುವ ಪರಿಣತ ಸೌಲಭ್ಯಗಳು

## NEUROSURGERY | ನರಶಸ್ತ್ರಚಿಕಿತ್ಸೆ

- Micro-neurosurgery (ಸೂಕ್ಷ್ಮ ನರಶಸ್ತ್ರಚಿಕಿತ್ಸೆ)
- Complex Spine Surgery (ಸಂಕೀರ್ಣ ಬೆನ್ನುಮೂಳೆಯ ಶಸ್ತ್ರಚಿಕಿತ್ಸೆ)
- Neuro Oncology (ಮಿದುಳಿನ ಗೆಡ್ಡೆಯ ಶಸ್ತ್ರಚಿಕಿತ್ಸೆ)
- Paediatric Neurosurgery (ಮಕ್ಕಳ ನರಶಸ್ತ್ರಚಿಕಿತ್ಸೆ)
- Endovascular Surgery (ರಕ್ತನಾಳದ ಶಸ್ತ್ರಚಿಕಿತ್ಸೆ)
- Epilepsy Surgery (ಮೂರ್ಛೆಯ ಸರ್ಜರಿ)
- Endoscopic Neurosurgery (ಅಂತಃಸೂಕ್ಷ್ಮ ದರ್ಶಿನಿ ನ್ಯೂರೋಸರ್ಜರಿ)
- Stereotactic & Functional Neurosurgery (ಸ್ಟೀರಿಯೊಟಾಕ್ಟಿಕ್ ಮತ್ತು ಕ್ರಿಯಾತ್ಮಕ ನರಶಸ್ತ್ರಚಿಕಿತ್ಸೆ)
- Peripheral Nerve Surgery (ಬಾಹ್ಯ ನರಗಳ ಸರ್ಜರಿ)
- Pain &Neuro Modulation (ನೋವು ಮತ್ತು ನ್ಯೂರೋ ಮಾಡ್ಯುಲೇಶನ್)
- Pituitary Surgery (ಪಿಟ್ಯುಟರಿ ಗ್ರಂಥಿ– ಸರ್ಜರಿ)
- Management of Head Injury (ತಲೆ ಗಾಯದ ನಿರ್ವಹಣೆ)
- Spinal Cord Surgery (ಬೆನ್ನುಹುರಿಯ ಶಸ್ತ್ರಚಿಕಿತ್ಸೆ)
- Skull Base Surgery (ತಲೆ ಬುರುಡೆ ಸರ್ಜರಿ)

## NEUROLOGY | ನರವಿಜ್ಞಾನ ವೈದ್ಯಕೀಯ

- Paediatric Neurology (ಮಕ್ಕಳ ನರವಿಜ್ಞಾನ)
- Epilepsy (ಮೂರ್ಛೆರೋಗ)
- Brain Attack -Stroke (ಮಿದುಳಿನ ಆಘಾತ – ಪಾರ್ಶ್ವವಾಯು, ಲಕ್ವ)
- Movement Disorder (ಚಲನೆಯ ಅಸ್ವಸ್ಥತೆ)
- Parkinson's Disease (ಪಾರ್ಕಿನ್ಸನ್ಸ್ ಕಾಯಿಲೆ)
- Demyelinating Disease (ಮರಗುಳಿ ಕಾಯಿಲೆ)
- Degenerative Disease (ನರ ಕ್ಷೀಣತೆ ರೋಗ)
- Neuro Muscular Disease (ನರ ಸ್ನಾಯುವಿನ ಕಾಯಿಲೆ)
- Neuro Endocrinology (ನ್ಯೂರೋ ಎಂಡೋಕ್ರೈನಾಲಜಿ)
- Neuro Ophthalmology (ನೇತ್ರ ನರವಿಜ್ಞಾನ)
- Neuro Otology (ಕಿವಿ ನರಗಳ ವಿಜ್ಞಾನ)
- Neuro Electrophysiology (ನ್ಯೂರೋ ಎಲೆಕ್ಟ್ರೋಫಿಸಿಯಾಲಜಿ)
- Neuro Infections (ನ್ಯೂರೋ ಸೋಂಕುಗಳು)
- Sleep Laboratory (ನಿದ್ರೆ ಪ್ರಯೋಗಾಲಯ)
- Headache Clinic (ತಲೆನೋವು ಚಿಕಿತ್ಸಾ ಕ್ಲಿನಿಕ್)

## NEUROCRITICAL CARE
## ನ್ಯೂರೋಕ್ರಿಟಿಕಲ್ ಕೇರ್

- Neuro Anesthesia (ನ್ಯೂರೋ ಅರಿವಳಿಕೆ)
- Neuro Radiology (ನ್ಯೂರೋ ರೇಡಿಯಾಲಜಿ)
- Neuro Pathology (ನರ ರೋಗನಿಧಾನ ಶಾಸ್ತ್ರ)
- Neuro Rehabilitation (ನರ ಪುನರ್ವಸತಿ)
- Regenerative Medicine (ರಿಜನರೇಟಿವ್ ಮೆಡಿಸಿನ್)
- Neuro Nutrition (ನರ ಪೌಷ್ಟಿಕ ಆಹಾರ)
- Genetic counselling (ವಂಶವಾಹಿನಿ ಸಮಾಲೋಚನೆ)
- Prenatal counselling (ಪ್ರಸವಪೂರ್ವ ಸಮಾಲೋಚನೆ)

## CENTRES OF EXCELLENCE
## ಶ್ರೇಷ್ಠತೆಯ ಕೇಂದ್ರಗಳು

- General Medicine (ಜನರಲ್ ಮೆಡಿಸಿನ್)
- General Surgery (ಸಾಮಾನ್ಯ ಶಸ್ತ್ರಚಿಕಿತ್ಸೆ)
- Gastroenterology (ಗ್ಯಾಸ್ಟ್ರೋಎಂಟರಾಲಜಿ)
- Medical Oncology (ವೈದ್ಯಕೀಯ ಆಂಕೊಲಾಜಿ)
- Surgical Oncology (ಸರ್ಜಿಕಲ್ ಆಂಕೊಲಾಜಿ)
- Paediatric Oncology (ಪೀಡಿಯಾಟ್ರಿಕ್ ಆಂಕೊಲಾಜಿ)
- Orthopedics (ಆರ್ಥೋಪೆಡಿಕ್ಸ್ ಮೂಳೆ ವಿಭಾಗ)
- Paediatric Orthopedics (ಪೀಡಿಯಾಟ್ರಿಕ್ ಆರ್ಥೋಪೆಡಿಕ್ಸ್ ಮಕ್ಕಳ ಮೂಳೆ ವಿಭಾಗ)
- ENT (ಇಎನ್‌ಟಿ)
- Plastic Surgery (ಪ್ಲಾಸ್ಟಿಕ್ ಸರ್ಜರಿ)
- Ophthalmology (ನೇತ್ರರೋಗ)
- Cardiology (ಕಾರ್ಡಿಯಾಲಜಿ ಹೃದಯರೋಗ)
- Pulmonology (ಶ್ವಾಸಕೋಶಶಾಸ್ತ್ರ)
- Pain Care (ನೋವು ಆರೈಕೆ)
- Vascular Surgery (ವಾಸ್ಕ್ಯುಲರ್ ಸರ್ಜರಿ)

**24x7 SERVICES | 24x7 ಸೇವೆಗಳು, 24x7 TRAUMA CARE | 24x7 ಟ್ರಾಮಾಕೇರ್**
**24x7 PHARMACY | 24x7 ಔಷಧಾಲಯ, CRITICAL CARE | 24x7 ಕ್ರಿಟಿಕಲ್ ಕೇರ್**

**DIAGNOSTICS, LABORATORIES, RADIOLOGY SERVICES**
**ಡಯಾಗ್ನೋಸ್ಟಿಕ್ಸ್, ಪ್ರಯೋಗಾಲಯಗಳು, ರೇಡಿಯಾಲಜಿ ಸೇವೆಗಳು**

BrainS

## BRAINS Super Speciality Hospital

192, T Mariyappa Road, Lalbagh Siddapura, Jayanagar 1st Block, Bengaluru, Karnataka 560011

24/7 Helpline +91 9148080000, For Appointments: +91 94832 40925

Printed and Published by **Dr N K Venkataramana** on behalf of BRAINS
from No. 560, 3rd Floor, 9th ' A' Main, Indira Nagar, Bengaluru-560038 and Printed at **Maruthi Printing Press,**
No.90/6-1. 1st cross, Vittal Nagar West, Near Marvel Apartment, Bengaluru-560026. Editor: **Dr N K Venkataramana**